ಕರ್ನಾಟಕ ವಿಧಾನ ಪರಿಷತ್ತು
ನೂರ ಐವತ್ತೆಂಟನೆಯ ಅಧಿವೇಶನ
(ಮುಂದುವರೆದ ಉಪವೇಶನ)

ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2026

(2026ರ ವಿಧಾನಸಭೆಯ ವಿಧೇಯಕ ಸಂಖ್ಯೆ–05)
(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)

ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 ಮತ್ತು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ:

ಇದು ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 1964ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.- ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ರಲ್ಲಿ,-

(1) 94ನೇ ಪ್ರಕರಣದಲ್ಲಿ,-

(i) ಉಪಪ್ರಕರಣ (1)ರ ಖಂಡ (ಬಿ)ರಲ್ಲಿನ ಉಪಖಂಡ(xiii) ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು; ಮತ್ತು

(ii) ಉಪಪ್ರಕರಣ (1ಬಿ)ಯನ್ನು ಬಿಟ್ಟುಬಿಡತಕ್ಕದ್ದು.

(2) 132ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ:-

"132ಎ. ಜಾಹಿರಾತಿನ ಮೇಲೆ ಶುಲ್ಕ.- ಯಾವುದೇ ಭೂಮಿಯ, ಕಟ್ಟಡದ, ಗೋಡೆಯ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಯಾವುದೇ ಜಾಹಿರಾತನ್ನು ಇಟ್ಟಿರುವ, ಪ್ರದರ್ಶಿಸುವ, ಅಳವಡಿಸುವ ಅಥವಾ ಉಳಿಸಿಕೊಂಡಿರುವ ಅಥವಾ ಯಾವುದೇ ರೀತಿಯಲ್ಲಾಗಲಿ ಯಾವುದೇ ಸಾರ್ವಜನಿಕ ಇಲ್ಲವೇ ಖಾಸಗಿ ಸ್ಥಳದಲ್ಲಾಗಲಿ ಸಾರ್ವಜನಿಕರ ದೃಷ್ಟಿಗೆ ಬೀಳುವಂತೆ ಯಾವುದೇ ಜಾಹಿರಾತನ್ನು ಪ್ರದರ್ಶಿಸುವ ಪ್ರತಿಯೊಬ್ಬ ವ್ಯಕ್ತಿಯು, ಹಾಗೆ ಇಟ್ಟಿರುವ, ಪ್ರದರ್ಶಿಸಿದ, ಅಳವಡಿಸಿದ, ಉಳಿಸಿಕೊಂಡಿರುವ ಅಥವಾ ಸಾರ್ವಜನಿಕ ದೃಷ್ಟಿಗೆ ಬೀಳುವಂತೆ ಪ್ರದರ್ಶಿಸಿರುವ ಪ್ರತಿಯೊಂದು ಜಾಹಿರಾತಿನ ಮೇಲೆ, ಪೌರ ಪಾಲಿಕೆ(municipal council) ನಿರ್ಣಯದ ಮೂಲಕ ನಿರ್ಧರಿಸಬಹುದಾದಂತೆ ಲೆಕ್ಕ ಹಾಕಿದಂಥ ದರಗಳಲ್ಲಿ ಮತ್ತು ಅಂಥ ವಿಧಾನದಲ್ಲಿ ಹಾಗೂ ಅಂಥ ವಿನಾಯಿತಿಗಳಿಗೊಳಪಟ್ಟು ತೆರಿಗೆಯನ್ನು ಪಾವತಿ ಮಾಡತಕ್ಕದ್ದು:

ಪರಂತು, ಆ ದರಗಳು ಯಾವಾಗಲೂ ಈ ಕುರಿತು ಸರ್ಕಾರವು ವಿಧಿಸಿದ ಗರಿಷ್ಠ ಮತ್ತು ಕನಿಷ್ಠ ಮಿತಿಗಳಿಗೆ ಒಳಪಟ್ಟಿರತಕ್ಕದ್ದು:

ಮತ್ತೂ ಪರಂತು,-

(ಎ) ಸಾರ್ವಜನಿಕ ಸಭೆಯ ಅಥವಾ ಮುನ್ಸಿಪಾಲಿಟಿಗಳ; ಅಥವಾ

(ಬಿ) ಯಾವುದೇ ಶಾಸನಾತ್ಮಕ ಸಂಸ್ಥೆಯ ಚುನಾವಣೆಯ; ಅಥವಾ

(ಸಿ) ಅಂಥ ಚುನಾವಣೆಗೆ ಸಂಬಂಧಿಸಿದಂತೆ ಉಮೇದುವಾರಿಕೆಯ,

- ಯಾವುದೇ ಜಾಹಿರಾತು ಅಥವಾ ನೋಟೀಸಿನ ಮೇಲೆ ಈ ಪ್ರಕರಣದಡಿ ಯಾವುದೇ ತೆರಿಗೆಯನ್ನು ವಿಧಿಸತಕ್ಕದ್ದಲ್ಲ:

ಅಲ್ಲದೆ ಪರಂತು ಸರ್ಕಾರವು ಅನುಮೋದಿಸಿದಂತೆ ಮತ್ತು ಅಧಿಸೂಚಿತ ನಿಯಮಗಳಡಿ ಜಾಹಿರಾತು ಶುಲ್ಕದಿಂದ ಅಂಥ ಇತರ ವಿನಾಯಿತಿಗಳನ್ನು ನೀಡಬಹುದು."

(3) ಪ್ರಕರಣ 133ರ ಬದಲಾಗಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"133. ಪೌರ ಪಾಲಿಕೆಯ ಲಿಖಿತ ಅನುಮತಿಯಿಲ್ಲದ ಜಾಹಿರಾತುಗಳ ನಿಷೇಧ.- (1) 132ಎ ಪ್ರಕರಣದಡಿ ಶುಲ್ಕ ವಿಧಿಸುವುದನ್ನು ಪೌರ ಪಾಲಿಕೆಯು ನಿರ್ಧರಿಸಿದ ತರುವಾಯ ಪೌರ ಪಾಲಿಕೆಯ ಲಿಖಿತ ಅನುಮತಿ ಇಲ್ಲದೆ ಪೌರ ಪ್ರದೇಶದೊಳಗಿನ ಯಾವುದೇ ಭೂಮಿಯ, ಕಟ್ಟಡದ, ಗೋಡೆಯ, ಜಾಹಿರಾತು ಫಲಕಗಳ ಅಥವಾ ರಚನೆಯ ಮೇಲೆ ಅಥವಾ ಅದರ ಮೇಲ್ಭಾಗದಲ್ಲಿ ಯಾವುದೇ ಜಾಹಿರಾತನ್ನು ಇಡತಕ್ಕದ್ದಲ್ಲ, ಪ್ರದರ್ಶಿಸತಕ್ಕದ್ದಲ್ಲ, ಅಳವಡಿಸತಕ್ಕದ್ದಲ್ಲ ಅಥವಾ ಉಳಿಸಿಕೊಳ್ಳತಕ್ಕದ್ದಲ್ಲ ಅಥವಾ ಯಾವುದೇ ಸ್ಥಳದಲ್ಲಿ ಯಾವುದೇ ರೀತಿಯಲ್ಲೇ ಆಗಲಿ ಪ್ರದರ್ಶಿಸತಕ್ಕದ್ದಲ್ಲ.

(2) ಪೌರ ಪಾಲಿಕೆಯು,-

(i) ಪೌರ ಪಾಲಿಕೆಯು ರಚಿಸಿದ ಯಾವುದೇ ಉಪವಿಧಿಯನ್ನು ಜಾಹಿರಾತು ಉಲ್ಲಂಘಿಸಿದರೆ; ಅಥವಾ

(ii) ಜಾಹಿರಾತಿಗೆ ಸಂಬಂಧಿಸಿದಂತೆ ಶುಲ್ಕ ಯಾವುದಾದರೂ ಬಾಕಿ ಇದ್ದು ಅದನ್ನು ಪಾವತಿ ಮಾಡಿಲ್ಲದಿದ್ದರೆ,

- ಅಂಥ ಅನುಮತಿಯನ್ನು ನೀಡತಕ್ಕದ್ದಲ್ಲ.

(3) ಉಪಪ್ರಕರಣ (2)ರ ಉಪಬಂಧಗಳಿಗೊಳಪಟ್ಟು, ಜಾಹಿರಾತು ಶುಲ್ಕಕ್ಕೆ ಹೊಣೆಯಾಗಬಹುದಾದ ಜಾಹಿರಾತಿನ ಸಂದರ್ಭದಲ್ಲಿ, ಪೌರ ಪಾಲಿಕೆಯು, ಯಾವ ಅವಧಿಗೆ ಶುಲ್ಕ ಪಾವತಿಯು ಸಂಬಂಧಪಟ್ಟಿದೆಯೋ ಆ ಅವಧಿಗೆ ಅನುಮತಿಯನ್ನು ನೀಡತಕ್ಕದ್ದು."

(4) ಪ್ರಕರಣ 136ರ ಬದಲಾಗಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"136. ಅನಧಿಕೃತ ಜಾಹಿರಾತನ್ನು ತೆಗೆದುಹಾಕುವುದು ಮತ್ತು ಕೆಡವಿಹಾಕುವುದು.- ಪ್ರಕರಣ 133ರ ಉಪಬಂಧಗಳಿಗೆ ತದ್ವಿರುದ್ಧವಾಗಿ ಅಥವಾ ಯಾವುದೇ ಅವಧಿಗೆ ಜಾಹಿರಾತನ್ನು ಇಡಲು, ಪ್ರದರ್ಶಿಸಲು ಅಳವಡಿಸಲು ಅಥವಾ ಉಳಿಸಿಕೊಳ್ಳಲು ನೀಡಲಾದ ಲಿಖಿತ ಅನುಮತಿಯು ಮುಕ್ತಾಯವಾದ ಅಥವಾ ಅನೂರ್ಜಿತವಾದ ತರುವಾಯ, ಯಾವುದೇ ಜಾಹಿರಾತನ್ನು ಇಟ್ಟರೆ, ಪ್ರದರ್ಶಿಸಿದರೆ, ಅಳವಡಿಸಿದರೆ ಅಥವಾ ಉಳಿಸಿಕೊಂಡರೆ, ಪೌರ ಆಯುಕ್ತ ಅಥವಾ ಮುಖ್ಯಾಧಿಕಾರಿಯು, ಲಿಖಿತ ನೋಟೀಸಿನ ಮೂಲಕ, ಯಾವ ಭೂಮಿಯ, ಕಟ್ಟಡದ, ಗೋಡೆಯ, ಜಾಹಿರಾತು ಫಲಕದ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಅದನ್ನು ಇಡಲಾಗಿದೆಯೋ, ಪ್ರದರ್ಶಿಸಲಾಗಿದೆಯೋ, ಅಳವಡಿಸಲಾಗಿದೆಯೋ ಅಥವಾ ಉಳಿಸಿಕೊಳ್ಳಲಾಗಿದೆಯೋ ಆ ಭೂಮಿಯ, ಕಟ್ಟಡದ, ಗೋಡೆಯ, ಜಾಹಿರಾತು ಫಲಕದ ಅಥವಾ ರಚನೆಯ ಮಾಲೀಕನನ್ನು ಅಥವಾ ಅಧಿಭೋಗದಾರನನ್ನು ಅಂಥ ಜಾಹಿರಾತನ್ನು ತೆಗೆದುಹಾಕುವಂತೆ ಅಥವಾ ಕೆಡವಿಹಾಕುವಂತೆ ಅಗತ್ಯಪಡಿಸಬಹುದು ಅಥವಾ ಯಾವುದೇ ಕಟ್ಟಡ, ಭೂಮಿ ಅಥವಾ ಸ್ವತ್ತನ್ನು ಪ್ರವೇಶಿಸಬಹುದು ಮತ್ತು ಜಾಹಿರಾತನ್ನು ತೆಗೆದುಹಾಕಿಸಬಹುದು:

ಪರಂತು, ಅಧಿಕೃತ ಅಥವಾ ಅನಧಿಕೃತ ಜಾಹಿರಾತು ಶುಲ್ಕ ಮತ್ತು/ಅಥವಾ ದಂಡವನ್ನು ಪಾವತಿಸಲು ಹೊಣೆಯಾಗಿರುವ ಜಾಹಿರಾತಿನ ಸಂದರ್ಭದಲ್ಲಿ, ಆದರೆ ಅದನ್ನು ಪಾವತಿಸಲು ವಿಳಂಬವಾದರೆ, ಆತನು ಶುಲ್ಕ ಮತ್ತು/ಅಥವಾ ದಂಡದ ಜೊತೆಗೆ ಜಾಹಿರಾತು ಶುಲ್ಕ ಅಥವಾ ದಂಡವು ಬಾಕಿಯಾದ ದಿನಾಂಕದಿಂದ ಅದನ್ನು ಪಾವತಿಸುವ ದಿನಾಂಕದವರೆಗೆ ಲೆಕ್ಕಹಾಕಲಾದಂತೆ ವಾರ್ಷಿಕವಾಗಿ ಶೇಕಡಾ ಹದಿನೆಂಟರಷ್ಟು ಬಡ್ಡಿ ದರದಲ್ಲಿ ಪಾವತಿಸಲು ಹೊಣೆಗಾರನಾಗಿರತಕ್ಕದ್ದು.

ಮತ್ತೂ ಪರಂತು, ನಿಯಮಗಳಲ್ಲಿ ನಿಯಮಿಸಬಹುದಾದಂತೆ ಯಾವುದೇ ಅನಧಿಕೃತ ಜಾಹಿರಾತು, ದಂಡ ಮತ್ತು ಜುಲ್ಮಾನೆಯನ್ನು ಸಹ ಪಾವತಿಸಲು ಹೊಣೆಯಾಗಿರತಕ್ಕದ್ದು. ಸದರಿ ದಂಡ ಅಥವಾ ಜುಲ್ಮಾನೆಯ ಪಾವತಿಯು ಅನಧಿಕೃತ ಜಾಹಿರಾತನ್ನು ಮುಂದುವರೆಸಲು ಹಕ್ಕುಳ್ಳದ್ದಾಗಿರತಕ್ಕದ್ದಲ್ಲ ಹಾಗೂ ಅದನ್ನು ಕ್ಷಿಪ್ರವಾಗಿ ತೆಗೆದುಹಾಕತಕ್ಕದ್ದು ಅಥವಾ ಕೆಡವಿಹಾಕತಕ್ಕದ್ದು.

ಅಲ್ಲದೇ ಪರಂತು, ಅನಧಿಕೃತ ಜಾಹಿರಾತುಗಳು ಅಥವಾ ಪ್ರದರ್ಶನಗಳ ಮೇಲಿನ ಜುಲ್ಮಾನೆಯನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ಸ್ಥಳದಲ್ಲೇ ವಸೂಲುಮಾಡಬಹುದು.

ಅಲ್ಲದೇ ಪರಂತು, ಈ ಅಧಿನಿಯಮದಡಿಯಲ್ಲಿ ಸ್ವತ್ತು ತೆರಿಗೆಯ ಬಾಕಿಗಾಗಿ ಕಾರಣಕೇಳಿ ನೋಟೀಸನ್ನು, ತಗಾದೆ ನೋಟಿಸನ್ನು ನೀಡಲು ಮತ್ತು ವಸೂಲು ಮಾಡಲು ಉಪಬಂಧಿಸಲಾದ ವಿಧಾನದ ಪ್ರಕಾರ, ಯಥೋಚಿತ ವ್ಯತ್ಯಾಸಗಳೊಂದಿಗೆ ನಿಯಮಿಸಲಾದ ಜಾಹಿರಾತು ಶುಲ್ಕಗಳ ಅನುಸಾರವಾಗಿ ಯಾವುದೇ ಬಾಕಿಗಳನ್ನು ನಿರ್ಧರಿಸಬಹುದು ಹಾಗೂ ಅದರ ಮೇಲೆ ತಗಾದೆ ಮತ್ತು ಕಾರಣ ಕೇಳಿ ನೋಟೀಸನ್ನು ನೀಡಬಹುದು ಮತ್ತು ವಸೂಲಾತಿಗಳನ್ನು ಮಾಡಬಹುದು.

ಅಲ್ಲದೇ ಪರಂತು, ಅನಧಿಕೃತ ಜಾಹಿರಾತುಗಳಿಗಾಗಿ ಅದರ ತೆಗೆದುಹಾಕುವಿಕೆಯ ವೆಚ್ಚವನ್ನು, ಇತರ ಉಪಬಂಧಗಳೊಂದಿಗೆ, ಅನಧಿಕೃತ ಜಾಹಿರಾತು ಸಾಮಗ್ರಿಗಳನ್ನು ವಶಪಡಿಸಿಕೊಳ್ಳುವ ಮತ್ತು ಮಾರಾಟ ಮಾಡುವ ಮೂಲಕ ಅಥವಾ ಸ್ವತ್ತು ತೆರಿಗೆಯ ಬಾಕಿಗಳನ್ನು ವಸೂಲು ಮಾಡಲು ಉಪಬಂಧಿಸಲಾದ ವಿಧಾನದಲ್ಲಿ ವಸೂಲುಮಾಡಬಹುದು."

(5) ಪ್ರಕರಣ 142ರಲ್ಲಿ ಉಪಪ್ರಕರಣ (1)ರಲ್ಲಿನ (ಬಿ) ಖಂಡದಲ್ಲಿರುವ ಮೊದಲನೇ ಪರಂತುಕದ (iv)ನೇ ನಮೂದನ್ನು ಬಿಟ್ಟುಬಿಡತಕ್ಕದ್ದು.

(6) ಪ್ರಕರಣ 324ರಲ್ಲಿ ಉಪಪ್ರಕರಣ (1)ರಲ್ಲಿನ (ಎಫ್ಎಫ್) ಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎಫ್ಎಫ್) ಯಾವ ಷರತ್ತುಗಳ ಮೇಲೆ ಅಥವಾ ಅವುಗಳಿಗೊಳಪಟ್ಟು ಯಾವುದೇ ಭೂಮಿ, ಕಟ್ಟಡ ಅಥವಾ ರಚನೆಯ ಮೇಲ್ಭಾಗದಲ್ಲಿ ಅಥವಾ ಯಾವುದೇ ವಾಹನದ ಮೇಲೆ ಅಥವಾ ಒಳಗೆ ಈ ಅಧಿನಿಯಮದ ಮೇರೆಗೆ ತೆರಿಗೆಗೆ ಗುರಿಯಾಗುವ ಯಾವುದೇ ಜಾಹೀರಾತನ್ನು ಇಡಲು, ಪ್ರದರ್ಶಿಸಲು, ಅಳವಡಿಸಿಕೊಳ್ಳಲು ಅಥವಾ ಉಳಿಸಿಕೊಳ್ಳಲು ಅಥವಾ ಇತರ ಯಾವುದೇ ರೀತಿಯಲ್ಲಿ ಪ್ರದರ್ಶಿಸುವುದಕ್ಕಾಗಿ ಅನುಮತಿಯನ್ನು ನೀಡಬಹುದೋ, ನವೀಕರಿಸಬಹುದೋ, ನಿರಾಕರಿಸಬಹುದೋ, ಅಮಾನತ್ತುಗೊಳಿಸಬಹುದೋ ಅಥವಾ ಹಿಂತೆಗೆದುಕೊಳ್ಳಬಹುದೋ ಆ ಷರತ್ತುಗಳು ನಿಯಮಿಸುವುದಕ್ಕಾಗಿ;"

(7) ಅನುಸೂಚಿ VII ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

3. 1977ರ ಕರ್ನಾಟಕ ಅಧಿನಿಯಮ 14ರ ತಿದ್ದುಪಡಿ.- ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ರಲ್ಲಿ,-

(1) ಪ್ರಕರಣ 103ರ ಖಂಡ (ಬಿ)ರಲ್ಲಿನ (vi)ನೇ ಉಪ-ಖಂಡವನ್ನು ಬಿಟ್ಟುಬಿಡತಕ್ಕದ್ದು.

(2)ಪ್ರಕರಣ 134ರ ಬದಲಾಗಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"134 ಜಾಹಿರಾತಿನ ಮೇಲೆ ಶುಲ್ಕ.- ಯಾವುದೇ ಭೂಮಿಯ, ಕಟ್ಟಡದ, ಗೋಡೆಯ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಯಾವುದೇ ಜಾಹಿರಾತನ್ನು ಇಟ್ಟಿರುವ, ಪ್ರದರ್ಶಿಸುವ, ಅಳವಡಿಸುವ ಅಥವಾ ಉಳಿಸಿಕೊಂಡಿರುವ ಅಥವಾ ಯಾವುದೇ ರೀತಿಯಲ್ಲಾಗಲಿ ಯಾವುದೇ ಸಾರ್ವಜನಿಕ ಇಲ್ಲವೇ ಖಾಸಗಿ ಸ್ಥಳದಲ್ಲಾಗಲಿ ಸಾರ್ವಜನಿಕರ ದೃಷ್ಟಿಗೆ ಬೀಳುವಂತೆ ಯಾವುದೇ ಜಾಹಿರಾತನ್ನು ಪ್ರದರ್ಶಿಸುವ ಪ್ರತಿಯೊಬ್ಬ ವ್ಯಕ್ತಿಯು, ಹಾಗೆ ಇಟ್ಟಿರುವ, ಪ್ರದರ್ಶಿಸಿದ, ಅಳವಡಿಸಿದ, ಉಳಿಸಿಕೊಂಡಿರುವ ಅಥವಾ ಸಾರ್ವಜನಿಕ ದೃಷ್ಟಿಗೆ ಬೀಳುವಂತೆ ಪ್ರದರ್ಶಿಸಿರುವ ಪ್ರತಿಯೊಂದು ಜಾಹಿರಾತಿನ ಮೇಲೆ, ಪಾಲಿಕೆಯ ನಿರ್ಣಯದ ಮೂಲಕ ನಿರ್ಧರಿಸಬಹುದಾದಂತೆ ಲೆಕ್ಕ ಹಾಕಿದಂಥ ದರಗಳಲ್ಲಿ ಮತ್ತು ಅಂಥ ವಿಧಾನದಲ್ಲಿ ಹಾಗೂ ಅಂಥ ವಿನಾಯಿತಿಗಳಿಗೊಳಪಟ್ಟು ತೆರಿಗೆಯನ್ನು ಪಾವತಿ ಮಾಡತಕ್ಕದ್ದು:

ಪರಂತು, ಆ ದರಗಳು ಯಾವಾಗಲೂ ಈ ಕುರಿತು ಸರ್ಕಾರವು ವಿಧಿಸಿದ ಗರಿಷ್ಠ ಮತ್ತು ಕನಿಷ್ಠ ಮಿತಿಗಳಿಗೆ ಒಳಪಟ್ಟಿರತಕ್ಕದ್ದು:

ಮತ್ತೂ ಪರಂತು,-

(ಎ) ಸಾರ್ವಜನಿಕ ಸಭೆಯ ಅಥವಾ ನಗರ ಪಾಲಿಕೆಗಳ; ಅಥವಾ

(ಬಿ) ಯಾವುದೇ ಶಾಸನಾತ್ಮಕ ಸಂಸ್ಥೆಯ ಚುನಾವಣೆಯ; ಅಥವಾ

(ಸಿ) ಅಂಥ ಚುನಾವಣೆಗೆ ಸಂಬಂಧಿಸಿದಂತೆ ಉಮೇದುವಾರಿಕೆಯ,

- ಯಾವುದೇ ಜಾಹಿರಾತು ಅಥವಾ ನೋಟೀಸಿನ ಮೇಲೆ ಈ ಪ್ರಕರಣದಡಿ ಯಾವುದೇ ತೆರಿಗೆಯನ್ನು ವಿಧಿಸತಕ್ಕದ್ದಲ್ಲ:

ಅಲ್ಲದೆ ಪರಂತು ಸರ್ಕಾರವು ಅನುಮೋದಿಸಿದಂತೆ ಮತ್ತು ಅಧಿಸೂಚಿತ ನಿಯಮಗಳಡಿ ಜಾಹಿರಾತು ಶುಲ್ಕದಿಂದ ಅಂಥ ಇತರ ವಿನಾಯಿತಿಗಳನ್ನು ನೀಡಬಹುದು."

(3) ಪ್ರಕರಣ 135ಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"135. ಆಯುಕ್ತನ ಲಿಖಿತ ಅನುಮತಿಯಿಲ್ಲದ ಜಾಹಿರಾತುಗಳ ನಿಷೇಧ.- (1) 134ನೇ ಪ್ರಕರಣದಡಿ ಶುಲ್ಕ ವಿಧಿಸುವುದನ್ನು ಪಾಲಿಕೆಯು ನಿರ್ಧರಿಸಿದ ತರುವಾಯ ಆಯುಕ್ತನ ಲಿಖಿತ ಅನುಮತಿ ಇಲ್ಲದೆ ಪೌರ ಪ್ರದೇಶದೊಳಗಿನ ಯಾವುದೇ ಭೂಮಿಯ, ಕಟ್ಟಡದ, ಗೋಡೆಯ, ಜಾಹಿರಾತು ಫಲಕಗಳ ಅಥವಾ ರಚನೆಯ ಮೇಲೆ ಅಥವಾ ಅದರ ಮೇಲ್ಭಾಗದಲ್ಲಿ ಯಾವುದೇ ಜಾಹಿರಾತನ್ನು ಇಡತಕ್ಕದ್ದಲ್ಲ, ಪ್ರದರ್ಶಿಸತಕ್ಕದ್ದಲ್ಲ, ಅಳವಡಿಸತಕ್ಕದ್ದಲ್ಲ ಅಥವಾ ಉಳಿಸಿಕೊಳ್ಳತಕ್ಕದ್ದಲ್ಲ ಅಥವಾ ಯಾವುದೇ ಸ್ಥಳದಲ್ಲಿ ಯಾವುದೇ ರೀತಿಯಲ್ಲೇ ಆಗಲಿ ಪ್ರದರ್ಶಿಸತಕ್ಕದ್ದಲ್ಲ.

(2) ಆಯುಕ್ತನು,-

(i) ಪಾಲಿಕೆಯು ರಚಿಸಿದ ಯಾವುದೇ ಉಪವಿಧಿಯನ್ನು ಜಾಹಿರಾತು ಉಲ್ಲಂಘಿಸಿದರೆ; ಅಥವಾ

(ii) ಜಾಹಿರಾತಿಗೆ ಸಂಬಂಧಿಸಿದಂತೆ ಶುಲ್ಕ ಯಾವುದಾದರೂ ಬಾಕಿ ಇದ್ದು ಅದನ್ನು ಪಾವತಿ ಮಾಡಿಲ್ಲದಿದ್ದರೆ,

- ಅಂಥ ಅನುಮತಿಯನ್ನು ನೀಡತಕ್ಕದ್ದಲ್ಲ.

(3) ಉಪಪ್ರಕರಣ (2)ರ ಉಪಬಂಧಗಳಿಗೊಳಪಟ್ಟು, ಜಾಹಿರಾತು ಶುಲ್ಕಕ್ಕೆ ಹೊಣೆಯಾಗಬಹುದಾದ ಜಾಹಿರಾತಿನ ಸಂದರ್ಭದಲ್ಲಿ, ಆಯುಕ್ತನು, ಯಾವ ಅವಧಿಗೆ ಶುಲ್ಕ ಪಾವತಿಯು ಸಂಬಂಧಪಟ್ಟಿದೆಯೋ ಆ ಅವಧಿಗೆ ಅನುಮತಿಯನ್ನು ನೀಡತಕ್ಕದ್ದು."

(4) ಪ್ರಕರಣ 138ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"138. ಅನಧಿಕೃತ ಜಾಹಿರಾತನ್ನು ತೆಗೆದುಹಾಕುವುದು.- 134 ಮತ್ತು 135ನೇ ಪ್ರಕರಣಗಳ ಉಪಬಂಧಗಳಿಗೆ ತದ್ವಿರುದ್ಧವಾಗಿ ಅಥವಾ ಯಾವುದೇ ಅವಧಿಗೆ ಜಾಹಿರಾತನ್ನು ಇಡಲು, ಪ್ರದರ್ಶಿಸಲು ಅಳವಡಿಸಲು ಅಥವಾ ಉಳಿಸಿಕೊಳ್ಳಲು ನೀಡಲಾದ ಲಿಖಿತ ಅನುಮತಿಯು ಮುಕ್ತಾಯವಾದ ಅಥವಾ ಅನೂರ್ಜಿತವಾದ ತರುವಾಯ, ಯಾವುದೇ ಜಾಹಿರಾತನ್ನು ಇಟ್ಟರೆ, ಪ್ರದರ್ಶಿಸಿದರೆ, ಅಳವಡಿಸಿದರೆ ಅಥವಾ ಉಳಿಸಿಕೊಂಡರೆ, ಆಯುಕ್ತನು ಲಿಖಿತ ನೋಟೀಸಿನ ಮೂಲಕ, ಯಾವ ಭೂಮಿಯ, ಕಟ್ಟಡದ, ಗೋಡೆಯ, ಜಾಹೀರಾತು ಫಲಕದ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಅದನ್ನು ಇಡಲಾಗಿದೆಯೋ, ಪ್ರದರ್ಶಿಸಲಾಗಿದೆಯೋ, ಅಳವಡಿಸಲಾಗಿದೆಯೋ ಅಥವಾ ಉಳಿಸಿಕೊಳ್ಳಲಾಗಿದೆಯೋ ಆ ಭೂಮಿಯ, ಕಟ್ಟಡದ, ಗೋಡೆಯ, ಜಾಹಿರಾತು ಫಲಕದ ಅಥವಾ ರಚನೆಯ ಮಾಲೀಕನನ್ನು ಅಥವಾ ಅಧಿಭೋಗದಾರನನ್ನು ಅಂಥ ಜಾಹಿರಾತನ್ನು ತೆಗೆದುಹಾಕುವಂತೆ ಅಥವಾ ಕೆಡವಿಹಾಕುವಂತೆ ಅಗತ್ಯಪಡಿಸಬಹುದು ಅಥವಾ ಯಾವುದೇ ಕಟ್ಟಡ, ಭೂಮಿ ಅಥವಾ ಸ್ವತ್ತನ್ನು ಪ್ರವೇಶಿಸಬಹುದು ಮತ್ತು ಜಾಹಿರಾತನ್ನು ತೆಗೆದುಹಾಕಿಸಬಹುದು:

ಪರಂತು, ಅಧಿಕೃತ ಅಥವಾ ಅನಧಿಕೃತ ಜಾಹಿರಾತು ಶುಲ್ಕ ಮತ್ತು/ಅಥವಾ ದಂಡವನ್ನು ಪಾವತಿಸಲು ಹೊಣೆಯಾಗಿರುವ ಜಾಹಿರಾತಿನ ಸಂದರ್ಭದಲ್ಲಿ, ಆದರೆ ಅದನ್ನು ಪಾವತಿಸಲು ವಿಳಂಬವಾದರೆ, ಆತನು ಶುಲ್ಕ ಮತ್ತು/ಅಥವಾ ದಂಡದ ಜೊತೆಗೆ ಜಾಹಿರಾತು ಶುಲ್ಕ ಅಥವಾ ದಂಡವು ಬಾಕಿಯಾದ ದಿನಾಂಕದಿಂದ ಅದನ್ನು ಪಾವತಿಸುವ ದಿನಾಂಕದವರೆಗೆ ಲೆಕ್ಕಹಾಕಲಾದಂತೆ ವಾರ್ಷಿಕವಾಗಿ ಶೇಕಡಾ ಹದಿನೆಂಟರಷ್ಟು ಬಡ್ಡಿ ದರದಲ್ಲಿ ಪಾವತಿಸಲು ಹೊಣೆಗಾರನಾಗಿರತಕ್ಕದ್ದು.

ಮತ್ತೂ ಪರಂತು, ನಿಯಮಗಳಲ್ಲಿ ನಿಯಮಿಸಬಹುದಾದಂತೆ ಯಾವುದೇ ಅನಧಿಕೃತ ಜಾಹಿರಾತು, ದಂಡ ಮತ್ತು ಜುಲ್ಮಾನೆಯನ್ನು ಸಹ ಪಾವತಿಸಲು ಹೊಣೆಯಾಗಿರತಕ್ಕದ್ದು. ಸದರಿ ದಂಡ ಅಥವಾ ಜುಲ್ಮಾನೆಯ ಪಾವತಿಯು ಅನಧಿಕೃತ ಜಾಹಿರಾತನ್ನು ಮುಂದುವರೆಸಲು ಹಕ್ಕುಳ್ಳದ್ದಾಗಿರತಕ್ಕದ್ದಲ್ಲ ಹಾಗೂ ಅದನ್ನು ಕ್ಷಿಪ್ರವಾಗಿ ತೆಗೆದುಹಾಕತಕ್ಕದ್ದು ಅಥವಾ ಕೆಡವಿಹಾಕತಕ್ಕದ್ದು.

ಅಲ್ಲದೇ ಪರಂತು, ಅನಧಿಕೃತ ಜಾಹಿರಾತುಗಳು ಅಥವಾ ಪ್ರದರ್ಶನಗಳ ಮೇಲಿನ ಜುಲ್ಮಾನೆಯನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ಸ್ಥಳದಲ್ಲೇ ವಸೂಲುಮಾಡಬಹುದು.

ಅಲ್ಲದೇ ಪರಂತು, ಈ ಅಧಿನಿಯಮದಡಿಯಲ್ಲಿ ಸ್ವತ್ತು ತೆರಿಗೆಯ ಬಾಕಿಗಾಗಿ ಕಾರಣಕೇಳಿ ನೋಟೀಸನ್ನು, ತಗಾದೆ ನೋಟಿಸನ್ನು ನೀಡಲು ಮತ್ತು ವಸೂಲು ಮಾಡಲು ಉಪಬಂಧಿಸಲಾದ ವಿಧಾನದ ಪ್ರಕಾರ, ಯಥೋಚಿತ ವ್ಯತ್ಯಾಸಗಳೊಂದಿಗೆ ನಿಯಮಿಸಲಾದ ಜಾಹಿರಾತು ಶುಲ್ಕಗಳ ಅನುಸಾರವಾಗಿ ಯಾವುದೇ ಬಾಕಿಗಳನ್ನು ನಿರ್ಧರಿಸಬಹುದು ಹಾಗೂ ಅದರ ಮೇಲೆ ತಗಾದೆ ಮತ್ತು ಕಾರಣ ಕೇಳಿ ನೋಟೀಸನ್ನು ನೀಡಬಹುದು ಮತ್ತು ವಸೂಲಾತಿಗಳನ್ನು ಮಾಡಬಹುದ.

ಅಲ್ಲದೇ ಪರಂತು, ಅನಧಿಕೃತ ಜಾಹಿರಾತುಗಳಿಗಾಗಿ ಅದರ ತೆಗೆದುಹಾಕುವಿಕೆಯ ವೆಚ್ಚವನ್ನು, ಇತರ ಉಪಬಂಧಗಳೊಂದಿಗೆ, ಅನಧಿಕೃತ ಜಾಹಿರಾತು ಸಾಮಗ್ರಿಗಳನ್ನು ವಶಪಡಿಸಿಕೊಳ್ಳುವ ಮತ್ತು ಮಾರಾಟ ಮಾಡುವ ಮೂಲಕ ಅಥವಾ ಸ್ವತ್ತು ತೆರಿಗೆಯ ಬಾಕಿಗಳನ್ನು ವಸೂಲು ಮಾಡಲು ಉಪಬಂಧಿಸಲಾದ ವಿಧಾನದಲ್ಲಿ ವಸೂಲುಮಾಡಬಹುದು."

(5) ಪ್ರಕರಣ 139ನ್ನು ಬಿಟ್ಟುಬಿಡತಕ್ಕದ್ದು.

(6) ಅನುಸೂಚಿ VIII ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

4. ತೆರಿಗೆ, ಉಪಕರ, ಶುಲ್ಕ ಮುಂತಾದವುಗಳ ವಿಧಿಸುವಿಕೆ ಮತ್ತು ಸಂಗ್ರಹಣೆಯನ್ನು ಸಿಂಧುಗೊಳಿಸುವುದು.- ಕಟ್ಟಡ, ಖಾಲಿ ನಿವೇಶನ ಮುಂತಾದವುಗಳ ಮೇಲೆ ತೆರಿಗೆ, ಉಪಕರ,ಶುಲ್ಕ ಇತ್ಯಾದಿಯಂತೆ ಯಾವುದೇ ಮೊತ್ತವನ್ನು ತೆರಿಗೆ, ಉಪಕರ, ಶುಲ್ಕ ಇತ್ಯಾದಿಯಾಗಿ ವಸೂಲಾತಿಗೆ, ನಿರ್ಧರಣೆಗೆ ಅಥವಾ ಸಂಗ್ರಹಣೆಗೆ ವಿರುದ್ಧವಾಗಿ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯಗೊಂಡ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪಿನಲ್ಲಿ, ಡಿಕ್ರಿಯಲ್ಲಿ ಅಥವಾ ಆದೇಶದಲ್ಲಿ ಹಾಗೂ ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2026ರ ಪ್ರಾರಂಭಕ್ಕೆ ಮೊದಲು, ಮೂಲ ಅಧಿನಿಯಮಗಳು ಅಥವಾ ಯಾವುದೇ ನಿಯಮಗಳು, ಅಧಿಸೂಚನೆ, ಆದೇಶ, ಮಾರ್ಗಸೂಚಿಗಳು ಅಥವಾ ಪತ್ರಗಳಲ್ಲಿನ ಉಪಬಂಧಗಳಡಿ ಅಂಥ ವಸೂಲಾತಿ, ನಿರ್ಧರಣೆ ಅಥವಾ ಸಂಗ್ರಹಣೆಯ ಸಂಬಂಧದಲ್ಲಿ ತೆರಿಗೆ, ಉಪಕರ, ಶುಲ್ಕ ಇತ್ಯಾದಿಗಳ ರೂಪದಲ್ಲಿ ಸಂಗ್ರಹಿಸಲಾಗಿದೆ ಎಂದು ತಾತ್ಪರ್ಯಗೊಂಡ ತೆರಿಗೆ, ಉಪಕರ, ಶುಲ್ಕ ಇತ್ಯಾದಿಗಳ ಯಾವುದೇ ವಸೂಲಾತಿಯನ್ನು ಮತ್ತು ಸಂಗ್ರಹಣೆಯಲ್ಲಿ ಕೈಗೊಂಡ ಅಥವಾ ಮಾಡಲಾದ ಯಾವುದೇ ಕ್ರಮ ಅಥವಾ ಕಾರ್ಯದಲ್ಲಿ (ನೀಡಲಾದ ಯಾವುದೇ ನೋಟೀಸುಗಳು ಅಥವಾ ಆದೇಶಗಳು ಅಥವಾ ಮಾಡಲಾದ ನಿರ್ಧರಣೆಗಳನ್ನು ಒಳಗೊಂಡಂತೆ) ಮತ್ತು ಹೂಡಿದ ಎಲ್ಲಾ ವ್ಯವಹರಣೆಗಳಲ್ಲಿ ಏನೇ ಒಳಗೊಂಡಿದ್ದರೂ, ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2026ರ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮಗಳಡಿಯಲ್ಲಿ ಮಾಡಿದ, ತೆಗೆದುಕೊಂಡ ಅಥವಾ ಕೈಗೊಂಡ ಅಂಥ ವಸೂಲಾತಿ, ನಿರ್ಧರಣೆ ಅಥವಾ ಸಂಗ್ರಹಣೆ ಎಂದು, ಎಲ್ಲಾ ಉದ್ದೇಶಗಳಿಗಾಗಿ ಸಿಂಧುವಾಗಿರತಕ್ಕದ್ದು ಮತ್ತು ಪರಿಣಾಮಕಾರಿಯಾಗಿರತಕ್ಕದ್ದು ಹಾಗೂ ಸಿಂಧುವಾಗಿದೆ ಮತ್ತು ಪರಿಣಾಮಕಾರಿಯಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ:-

(ಎ) ಸರ್ಕಾರವು ಅಥವಾ ಸಂದರ್ಭಾನುಸಾರವಾಗಿ, ಮುನ್ಸಿಪಾಲಿಟಿ ಅಥವಾ ಪಾಲಿಕೆ ಅಧಿಕಾರಿಗಳು, ಎಲ್ಲಾ ಉದ್ದೇಶಗಳಿಗಾಗಿ ಶುಲ್ಕದಂತೆ ಯಾವುದೇ ಮೊತ್ತದ ವಸೂಲಾತಿ, ನಿರ್ಧರಣೆ ಅಥವಾ ಸಂಗ್ರಹಣೆ ಸಂಬಂಧದಲ್ಲಿ ಕೈಗೊಂಡ ಎಲ್ಲಾ ಕ್ರಮಗಳು, ವ್ಯವಹರಣೆಗಳು ಅಥವಾ ವಿಷಯಗಳನ್ನು ಅಥವಾ ತೆಗೆದುಕೊಂಡ ಯಾವುದೇ ಕ್ರಮವನ್ನು, ಯಾವಾಗಲೂ ಕಾನೂನಿಗನುಸಾರವಾಗಿ ಮಾಡಲಾಗಿದೆ, ಕೈಗೊಳ್ಳಲಾಗಿದೆ ಅಥವಾ ತೆಗೆದುಕೊಳ್ಳಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು.

(ಬಿ) ಅಂಥ ಯಾವುದೇ ಶುಲ್ಕದ ಮರುಸಂದಾಯಕ್ಕಾಗಿ ಯಾವುದೇ ನ್ಯಾಯಾಲಯದಲ್ಲಿ ಅಥವಾ ನ್ಯಾಯಾಧಿಕರಣದಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ಯಾವುದೇ ದಾವೆಯನ್ನು ಅಥವಾ ಇತರ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ ಅಥವಾ ಮುಂದುವರಿಸತಕ್ಕದ್ದಲ್ಲ; ಮತ್ತು

(ಸಿ) ಯಾವುದೇ ನ್ಯಾಯಾಲಯವು, ಯಾವುದೇ ಅಂಥ ಶುಲ್ಕದ ಮರುಸಂದಾಯವನ್ನು ನಿರ್ದೇಶಿಸಿ ಯಾವುದೇ ಡಿಕ್ರಿಯನ್ನು ಅಥವಾ ಆದೇಶವನ್ನು ಜಾರಿಗೊಳಿಸತಕ್ಕದಲ್ಲ."

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ 36)ರ ಉಪಬಂಧಗಳಿಗೆನುಸಾರವಾಗಿ ಜಾಹಿರಾತುಗಳಿಗೆ ಉಪಬಂಧಗಳನ್ನು ಕಲ್ಪಿಸಲು ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ನ್ನು ಮತ್ತು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ಗಳನ್ನು ಈ ಮುಂದಿನವುಗಳಿಗಾಗಿ ಉಪಬಂಧಿಸಲು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(i) ಜಾಹಿರಾತುಗಳ ಮೇಲೆ ಶುಲ್ಕವನ್ನು ವಿಧಿಸುವುದು ಮತ್ತು ಸಂಗ್ರಹಿಸುವುದು;

(ii) ಅನಧಿಕೃತ ಜಾಹಿರಾತುಗಳನ್ನು ನಿಯಂತ್ರಿಸುವುದು; ಮತ್ತು

(iii) ಹಾಗೆ ಸಂಗ್ರಹಿಸಲಾದ ಅಂಥ ಶುಲ್ಕ ಮತ್ತು ದಂಡಗಳನ್ನು ಸಿಂಧುಗೊಳಿಸುವುದು.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

ಖಂಡ 2	ಪ್ರಕರಣ 136ರ ಉಪಖಂಡ (4)ರಲ್ಲಿನ ಪರಂತುಕಕ್ಕೆ ಪ್ರತಿಯೋಜಿಸಲು ಉದ್ದೇಶಿಸಿರುವ ಅನಧಿಕೃತ ಜಾಹಿರಾತುಗಳಿಗಾಗಿ ಪಾವತಿಸಲು ಹೊಣೆಯಾಗಿರುವ ದಂಡ ಮತ್ತು ಜುಲ್ಮಾನೆ ಹಾಗೂ ಅನಧಿಕೃತ ಜಾಹಿರಾತುಗಳು ಅಥವಾ ಪ್ರದರ್ಶನಗಳ ಮೇಲೆ ಜಲ್ಮಾನೆಯನ್ನು ಸ್ಥಳದಲ್ಲಿಯೇ ವಸೂಲು ಮಾಡುವ ವಿಧಾನದ ಕುರಿತು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.
ಖಂಡ 3	ಪ್ರಕರಣ 138ರ ಉಪಖಂಡ (4) ಪರಂತುಕಕ್ಕೆ ಪ್ರತಿಯೋಜಿಸಲು ಉದ್ದೇಶಿಸಿರುವ ಅನಧಿಕೃತ ಜಾಹಿರಾತುಗಳಿಗಾಗಿ ಪಾವತಿಸಲು ಹೊಣೆಯಾಗಿರುವ ದಂಡ ಮತ್ತು ಜುಲ್ಮಾನೆ ಹಾಗೂ ಅನಧಿಕೃತ ಜಾಹಿರಾತುಗಳು ಅಥವಾ ಪ್ರದರ್ಶನಗಳ ಮೇಲೆ ಜಲ್ಮಾನೆಯನ್ನು ಸ್ಥಳದಲ್ಲಿಯೇ ವಸೂಲು ಮಾಡುವ ವಿಧಾನದ ಕುರಿತು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನೆಯ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿರುತ್ತದೆ.

ಬಿ. ಎಸ್. ಸುರೇಶ
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಮಂತ್ರಿ

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಅನುಬಂಧ

ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964

(1964ರ ಕರ್ನಾಟಕ ಅಧಿನಿಯಮ ಸಂಖ್ಯೆ 22)

ಉದ್ಧೃತ ಭಾಗ

XXX XXX XXX

94. ವಿಧಿಸಬಹುದಾದ ತೆರಿಗೆಗಳು.- (1) ಮುನ್ಸಿಪಲ್ ಕೌನ್ಸಿಲ್ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು,-

(ಬಿ) ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ ದರಗಳಿಗೆ ಮೀರದಂತೆ:-

XXX XXX XXX

(xiii) ಯಾವುದೇ ಭೂಮಿ, ಕಟ್ಟಡ, ಗೋಡೆ, ಪ್ರಕಟಣ ಪಟ, ಚೌಕಟ್ಟು, ಕಂಬ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಅಥವಾ ಯಾವುದೇ ವಾಹನದ ಮೇಲೆ ಅಥವಾ ಅದರಲ್ಲಿ ನಿಲ್ಲಿಸಿದ, ಪ್ರದರ್ಶಿಸಿದ, ಜೋಡಿಸಿದ ಅಥವಾ ಉಳಿಸಿಕೊಂಡ, ಅಥವಾ ಸಾರ್ವಜನಿಕ ಬೀದಿ ಅಥವಾ ಸಾರ್ವಜನಿಕ ಸ್ಥಳದಿಂದ ಯಾವುದೇ ರೀತಿಯಲ್ಲಾಗಲಿ ಸಾರ್ವಜನಿಕರ ದೃಷ್ಟಿಗೆ ಪ್ರದರ್ಶಿಸಿದ ಚಲನಚಿತ್ರ ಸಾಧನಗಳ ಮೂಲಕ ಪ್ರದರ್ಶಿಸಿದ ಯಾವುದೇ ಜಾಹೀರಾತನ್ನು ಒಳಗೊಂಡು ಜಾಹೀರಾತುಗಳ (ವರ್ತಮಾನ ಪತ್ರಿಕೆಗಳಲ್ಲಿ ಹೊರತುಪಡಿಸಿ) ಮೇಲಿನ ತೆರಿಗೆ ಅಥವಾ ಶುಲ್ಕ;

XXX XXX XXX

133. ಮುನ್ಸಿಪಲ್ ಕೌನ್ಸಿಲ್‌ನ ಬರಹದಲ್ಲಿನ ಅನುಮತಿಯಿಲ್ಲದ ಜಾಹೀರಾತುಗಳ ನಿಷೇಧ.- (1) ಯಾವುದೇ ಜಾಹೀರಾತನ್ನು ಮುನ್ಸಿಪಲ್ ಕೌನ್ಸಿಲ್ 94ನೇ ಪ್ರಕರಣದ ಮೇರೆಗೆ ತೆರಿಗೆ ವಿಧಿಸುವಿಕೆಯನ್ನು ನಿರ್ಧರಿಸಿದ ತರುವಾಯ ಯಾವುದೇ ಭೂಮಿ, ಕಟ್ಟಡ, ಗೋಡೆ, ಪ್ರಕಟಣಾ ಫಲಕ, ಚೌಕಟ್ಟು, ಸ್ತಂಭ ಅಥವಾ ರಚನೆಯ ಮೇಲ್ಭಾಗದಲ್ಲಿ ಅಥವಾ ಯಾವುದೇ ವಾಹನದ ಮೇಲೆ ಅಥವಾ ಅಲ್ಲಿ ಪ್ರದರ್ಶಿಸತಕ್ಕದ್ದಲ್ಲ, ನಿಲ್ಲಿಸತಕ್ಕದ್ದಲ್ಲ, ಜೋಡಿಸತಕ್ಕದ್ದಲ್ಲ ಅಥವಾ ಉಳಿಸಿಕೊಳ್ಳತಕ್ಕದ್ದಲ್ಲ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ಬೈಲಾಗಳಿಗನುಸಾರವಾಗಿ ಕೊಟ್ಟ ಮುನ್ಸಿಪಲ್ ಕೌನ್ಸಿಲ್‌ನ ಬರಹದಲ್ಲಿನ ಅನುಮತಿಯಿಲ್ಲದೆ ಮುನ್ಸಿಪಲ್ ಏರಿಯಾದೊಳಗೆ ಯಾವುದೇ ಸ್ಥಳದಲ್ಲಿ ಯಾವ ರೀತಿಯಲ್ಲಿಯೇ ಆಗಲಿ ಪ್ರದರ್ಶಿಸತಕ್ಕದ್ದಲ್ಲ.

(2) ಮುನ್ಸಿಪಲ್ ಕೌನ್ಸಿಲ್ ಅನುಮತಿಯನ್ನು,-

(i) ಅಂಥ ಜಾಹೀರಾತು, ಈ ಅಧಿನಿಯಮದ ಮೇರೆಗೆ ರಚಿಸಲಾದ ಯಾವುದೇ ಬೈಲಾಗಳನ್ನು ಉಲ್ಲಂಘಿಸಿದರೆ; ಅಥವಾ

(ii) ಅಂಥ ಜಾಹೀರಾತಿಗೆ ಸಂಬಂಧಿಸಿದಂತೆ ಬಾಕಿಯಾಗಿರುವ ತೆರಿಗೆ ಅಥವಾ ಶುಲ್ಕ ಯಾವುದಾದರೂ ಇದ್ದರೆ, ಅದನ್ನು ಸಂದಾಯ ಮಾಡಿರದಿದ್ದರೆ

- ಕೊಡತಕ್ಕದ್ದಲ್ಲ.

(3) ಉಪ-ಪ್ರಕರಣ (2)ರ ಉಪಬಂಧಗಳಿಗೊಳಪಟ್ಟು, ಜಾಹೀರಾತು ತೆರಿಗೆಗೆ ಗುರಿಯಾದ ಜಾಹೀರಾತಿನ ಸಂದರ್ಭದಲ್ಲಿ ಮುನ್ಸಿಪಲ್ ಕೌನ್ಸಿಲ್ ಯಾವ ಅವಧಿಗೆ ತೆರಿಗೆಯ ಸಂದಾಯವು ಸಂಬಂಧಪಟ್ಟಿದೆಯೋ ಆ ಅವಧಿಗೆ ಅನುಮತಿಯನ್ನು ಕೊಡತಕ್ಕದ್ದು ಮತ್ತು ಅಂಥ ಅನುಮತಿಗೆ ಸಂಬಂಧಿಸಿದ ಯಾವುದೇ ಫೀಜನ್ನು ವಿಧಿಸತಕ್ಕದ್ದಲ್ಲ.

XXX XXX XXX

136. ಅನಧಿಕೃತ ಜಾಹೀರಾತುಗಳನ್ನು ತೆಗೆದುಹಾಕುವುದು.- 133ನೇ ಪ್ರಕರಣದ ಉಪಬಂಧವನ್ನು ಉಲ್ಲಂಘಿಸಿ ಯಾವುದೇ ಜಾಹೀರಾತನ್ನು ಪ್ರದರ್ಶಿಸಿದರೆ, ನಿಲ್ಲಿಸಿದರೆ, ಜೋಡಿಸಿದರೆ ಅಥವಾ ಉಳಿಸಿಕೊಂಡರೆ ಅಥವಾ ಯಾವುದೇ ಅವಧಿಗಾಗಿ ಅದರ ಪ್ರದರ್ಶನ, ನಿಲ್ಲಿಸುವಿಕೆ, ಜೋಡಣೆ ಅಥವಾ ಉಳಿಸಿಕೊಳ್ಳುವಿಕೆಗಾಗಿ

ಬರಹದಲ್ಲಿನ ಅನುಮತಿಯು ಮುಕ್ತಾಯಗೊಂಡ ಅಥವಾ ಶೂನ್ಯವಾದ ತರುವಾಯ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು, ಯಾವುದರ ಮೇಲೆ ಅಥವಾ ಮೇಲ್ಭಾಗದಲ್ಲಿ ಅದನ್ನು ಪ್ರದರ್ಶಿಸಿದ, ನಿಲ್ಲಿಸಿದ, ಜೋಡಿಸಿದ ಅಥವಾ ಉಳಿಸಿಕೊಂಡ ಭೂಮಿ, ಕಟ್ಟಡ, ಗೋಡೆ, ಪ್ರಕಟಣಾ ಫಲಕ, ಚೌಕಟ್ಟು, ಸ್ತಂಭ ಅಥವಾ ರಚನೆ ಅಥವಾ ವಾಹನದ ಒಡೆಯ ಅಥವಾ ಅಧಿಭೋಗದಾರನನ್ನು ಬರಹದಲ್ಲಿನ ನೋಟೀಸಿನ ಮೂಲಕ ಅಂಥ ಜಾಹೀರಾತನ್ನು ಕೆಳಗಿಳಿಸುವಂತೆ ಅಥವಾ ತೆಗೆದುಹಾಕುವಂತೆ ಅಗತ್ಯಪಡಿಸಬಹುದು ಅಥವಾ ಯಾವುದೇ ಭೂಮಿ, ಕಟ್ಟಡ, ಸ್ವತ್ತು ಅಥವಾ ವಾಹನವನ್ನು ಪ್ರವೇಶಿಸಬಹುದು ಮತ್ತು ಜಾಹೀರಾತನ್ನು ಕಳಚಿಹಾಕಬಹುದು, ಕೆಳಗಿಳಿಸಬಹುದು ಅಥವಾ ತೆಗೆದುಹಾಕಬಹುದು ಅಥವಾ ಕೆಡಿಸಬಹುದು, ವಿರೂಪಗೊಳಿಸಬಹುದು ಅಥವಾ ಮರೆ ಮಾಡಬಹುದು.

XXX XXX XXX

142. ತೆರಿಗೆಗಳಿಗಾಗಿ ಬಿಲ್ಲನ್ನು ಸಲ್ಲಿಸುವುದು.- (1) (ಎ) ಈ ಅಧಿನಿಯಮದ ಯಾವುದೇ ಉಪಬಂಧಗಳ ಮೂಲಕ ಅಥವಾ ಮೇರೆಗೆ ಈ ಅಧ್ಯಾಯದ ಮೂಲಕ ಉಪಬಂಧಿಸಲಾದ ರೀತಿಯಲ್ಲಿ ಯಾವುದೇ ಮೊಬಲಗನ್ನು ವಸೂಲೀಯವಾಗತಕ್ಕದ್ದೆಂದು ಘೋಷಿಸಿದಾಗ; ಅಥವಾ

(ಬಿ) ಯಾವುದೇ ಮುನ್ಸಿಪಲ್ ಏರಿಯಾದಲ್ಲಿ ಈಗ ವಿಧಿಸಿದ ಅಥವಾ ಇನ್ನು ಮುಂದೆ ವಿಧಿಸಬಹುದಾದ ಯಾವುದೇ ತೆರಿಗೆಯ ಬಾಬ್ತಿನ ಮೊಬಲಗು ಅಥವಾ ಕಂತು ಆಗಿ ಕ್ಲೇಮು ಮಾಡಬಹುದಾದಂಥ ಯಾವುದೇ ಮೊಬಲಗು ಬಾಕಿಯಾಗಿರುವಾಗ,

ಮುನ್ಸಿಪಲ್ ಕೌನ್ಸಿಲ್, ಕಾರ್ಯಸಾಧ್ಯವಾದಷ್ಟು ಕಡಿಮೆ ವಿಳಂಬದಲ್ಲಿ ಅದರ ಸಂದಾಯಕ್ಕೆ ಹೊಣೆಯಾಗಿರುವ ವ್ಯಕ್ತಿಗೆ, ಬಾಕಿಯೆಂದು ಕ್ಲೇಮು ಮಾಡಿದ ಮೊತ್ತಕ್ಕಾಗಿ ಬಿಲ್ಲನ್ನು ಸಲ್ಲಿಸುವಂತೆ ಮಾಡತಕ್ಕದ್ದು:

ಪರಂತು, ಯಾವುದೇ ಅಂಥ ಬಿಲ್ಲು,-

(i) ವಾಹನಗಳ ಮೇಲೆ ತೆರಿಗೆ;

(ii) ನಾಯಿಗಳ ಮೇಲೆ ತೆರಿಗೆ;

(iii) ತಗಾದೆಯ ಮೇಲೆ ಸಂದಾಯ ಮಾಡಬೇಕಾದ ದಾರಿಸುಂಕ;

(iv)ಜಾಹೀರಾತುಗಳ ಮೇಲಿನ ತೆರಿಗೆ

XXX XXX XXX

324. ಬೈಲಾಗಳ ರಚನಾಧಿಕಾರ.- (1) ಈ ಅಧಿನಿಯಮಕ್ಕೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೊಳಪಟ್ಟು ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್, ಕಾಲಕಾಲಕ್ಕೆ,-

(ಎಫ್‌ಎಫ್) ಯಾವ ಷರತ್ತುಗಳ ಮೇಲೆ ಅಥವಾ ಅವುಗಳಿಗೊಳಪಟ್ಟು ಯಾವುದೇ ಭೂಮಿ, ಕಟ್ಟಡ ಅಥವಾ ರಚನೆಯ ಮೇಲ್ಭಾಗದಲ್ಲಿ ಅಥವಾ ಯಾವುದೇ ವಾಹನದ ಮೇಲೆ ಅಥವಾ ಒಳಗೆ ಈ ಅಧಿನಿಯಮದ ಮೇರೆಗೆ ತೆರಿಗೆಗೆ ಗುರಿಯಾಗುವ ಯಾವುದೇ ಜಾಹೀರಾತನ್ನು ನಿಲ್ಲಿಸಲು, ಪ್ರದರ್ಶಿಸಲು, ಜೋಡಿಸಲು ಅಥವಾ ಉಳಿಸಿಕೊಳ್ಳಲು ಅಥವಾ ಇತರ ಯಾವುದೇ ರೀತಿಯಲ್ಲಿ ಪ್ರದರ್ಶಿಸುವುದಕ್ಕಾಗಿ ಅನುಮತಿಯನ್ನು ಕೊಡಬಹುದೋ, ನವೀಕರಿಸಬಹುದೋ, ನಿರಾಕರಿಸಬಹುದೋ, ಅಮಾನತ್ತುಗೊಳಿಸಬಹುದೋ ಅಥವಾ ಹಿಂತೆಗೆದುಕೊಳ್ಳಬಹುದೋ ಆ ಷರತ್ತುಗಳ್ನು ನಿಯಮಿಸುವುದಕ್ಕಾಗಿ;

XXX XXX XXX

ಅನುಸೂಚಿ- VII

(ಪ್ರಕರಣ-94)

ಜಾಹೀರಾತುಗಳ ಮೇಲೆ ತೆರಿಗೆ

ಕ್ರಮ ಸಂಖ್ಯೆ	**ವಿವರಗಳು**	**ಪ್ರತಿ ವರ್ಷಕ್ಕೆ ತೆರಿಗೆಯ ಗರಿಷ್ಠ ಮೊಬಲಗು**
1.	ಭೂಮಿ, ಕಟ್ಟಡ, ಗೋಡೆ, ಪ್ರಕಟಣಾ ಫಲಕಗಳು, ಚೌಕಟ್ಟು, ಸ್ತಂಭ ರಚನೆಗಳು ಇತ್ಯಾದಿಗಳ ಮೇಲೆ ದೀಪಾಲಂಕಾರ ಮಾಡದಿರುವ ಜಾಹೀರಾತುಗಳು	ರೂ. ಪೈ.
	(ಎ) 1 ಚದರ ಮೀಟರ್ ವರೆಗಿನ ಜಾಗಕ್ಕೆ	10-00
	(ಬಿ) 1 ಚದರ ಮೀಟರ್ ಗಿಂತ ಹೆಚ್ಚಾಗಿ ಆದರೆ 2.5 ಚದರ ಮೀಟರ್ ವರೆಗೆ	16-00
	(ಸಿ) ಪ್ರತಿಯೊಂದು ಹೆಚ್ಚಿನ 2.5 ಚದರ ಮೀಟರ್ ಗೆ ಅಥವಾ ಅದಕ್ಕಿಂತ ಕಡಿಮೆ ಜಾಗಕ್ಕೆ	16-00
2.	ಎತ್ತುಗಳ, ಕುದುರೆಗಳ ಅಥವಾ ಇತರ ಪ್ರಾಣಿಗಳ ಮನುಷ್ಯರ ಸೈಕಲ್ ಅಥವಾ ಯಾವುದೇ ಸಾಧನದ ಮೂಲಕ ಎಳೆಯಲಾಗುವ ವಾಹನಗಳ ಮೇಲೆ ಸಾಗಿಸುವ ದೀಪಾಲಂಕಾರ ಮಾಡದಿರುವ ಜಾಹೀರಾತುಗಳು.	
	(ಎ) 5 ಚದರ ಮೀಟರ್ ವರೆಗಿನ ಜಾಗಕ್ಕೆ	60-00
	(ಬಿ) ಹೆಚ್ಚಿನ ಪ್ರತಿ 5 ಚದರ ಮೀಟರು ಅಥವಾ ಕಡಿಮೆ ಜಾಗಕ್ಕೆ	60-00
3.	ವಾಹನಗಳ ಮೇಲೆ ಸಾಗಿಸುವ ದೀಪಾಲಂಕೃತ ಜಾಹೀರಾತು ಫಲಕಗಳು	
	(ಎ) 5 ಚದರ ಮೀಟರ್ ವರೆಗಿನ ಜಾಗಕ್ಕೆ	75-00
	(ಬಿ) ಪ್ರತಿ 1 ಚದರ ಮೀಟರ್ ಅಥವಾ ಕಡಿಮೆ ಜಾಗಕ್ಕೆ	15-00
4.	ಫಲಕಗಳನ್ನು ಹೊತ್ತುಕೊಂಡಿರುವವನು ಒಯ್ಯುವ ದೀಪಾಲಂಕೃತ ಜಾಹೀರಾತು ಫಲಕಗಳು	
	(ಎ) 1 ಚದರ ಮೀಟರ್ ನ್ನು ಮೀರದ ಪ್ರತಿಯೊಂದು ಫಲಕಕ್ಕೆ	15-00

ಕ್ರಮ ಸಂಖ್ಯೆ	**ವಿವರಗಳು**	**ಪ್ರತಿ ವರ್ಷಕ್ಕೆ ತೆರಿಗೆಯ ಗರಿಷ್ಠ ಮೊಬಲಗು**
	(ಬಿ) 1 ಚದರ ಮೀಟರ್ ಮೀರಿದ ಮತ್ತು 2.5 ಚದರ ಮೀಟರ್ ವರೆಗಿನ ಪ್ರತಿಯೊಂದು ಫಲಕಕ್ಕೆ	30-00
	(ಸಿ) ಪ್ರತಿಯೊಂದು 1 ಚದರ ಮೀಟರ್ ಅಥವಾ ಕಡಿಮೆ ಜಾಗಕ್ಕೆ	15-00
5.	ಜೋಡಿ ಜಾಹೀರಾತು ಫಲಕಗಳನ್ನು ಹೊತ್ತುಕೊಂಡಿರುವವನು ಸಾಗಿಸುವ ದೀಪಾಲಂಕೃತ ಜಾಹೀರಾತು ಫಲಕಗಳು	
	(ಎ) 1 ಚದರ ಮೀಟರ್ ನ್ನು ಮೀರದ ಪ್ರತಿಯೊಂದು ಫಲಕಕ್ಕೆ	30-00
	(ಬಿ) 1 ಚದರ ಮೀಟರ್ ನ್ನು ಮೀರಿದ ಮತ್ತು 2.5 ಚದರ ಮೀಟರ್	50-00

	ವರೆಗಿನ ಪ್ರತಿಯೊಂದು ಫಲಕಕ್ಕೆ	
	(ಸಿ) ಹೆಚ್ಚಿನ ಪ್ರತಿ 1 ಚದರ ಮೀಟರ್ ಜಾಗಕ್ಕೆ ಅಥವಾ ಕಡಿಮೆ ಜಾಗಕ್ಕೆ	30-00
6.	ಭೂಮಿ, ಕಟ್ಟಡ, ಗೋಡೆ ಅಥವಾ ಪ್ರಕಟಣಾ ಪಟಗಳು, ಚೌಕಟ್ಟು, ಸ್ತಂಭ, ರಚನೆಗಳು ಇತ್ಯಾದಿಗಳ ಮೇಲೆ ದೀಪಾಲಂಕೃತ ಜಾಹೀರಾತುಗಳು	
	(ಎ) 2 ಚದರ ಮೀಟರ್ ವರೆಗಿನ ಜಾಗಕ್ಕೆ	15-00
	(ಬಿ) 2 ಚದರ ಮೀಟರ್ ಗಿಂತ ಹೆಚ್ಚಿಗೆ ಮತ್ತು 5 ಚದರ ಮೀಟರ್ ವರೆಗಿನ ಜಾಗಕ್ಕೆ	30-00
	(ಸಿ) 5 ಚದರ ಮೀಟರ್ ಗಳಿಗೆ ಹೆಚ್ಚಿನ ಮತ್ತು 2.5 ಚದರ ಮೀಟರ್ ವರೆಗಿನ ಜಾಗಕ್ಕೆ	35-00
	(ಡಿ) ಹೆಚ್ಚಿನ ಪ್ರತಿ 2.5 ಚದರ ಮೀಟರ್ ಅಥವಾ ಕಡಿಮೆ ಜಾಗಕ್ಕೆ	35-00
7.	ಸಿನಿಮಾ ಮಂದಿರಗಳಲ್ಲಿ ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ, ಲ್ಯಾಂಟರ್ನ್ ಸ್ಲೈಡ್ಸ್ ಸಾಧನಗಳ ಅಥವಾ ಅಂಥವೇ ಸಾಧನಗಳ ಮೂಲಕ ಪರದೆಗಳ ಮೇಲೆ ಪ್ರದರ್ಶಿಸಿದ ಜಾಹೀರಾತುಗಳು	
	(ಎ) 5 ಚದರ ಮೀಟರ್ ವರೆಗಿನ ಜಾಗಕ್ಕೆ	50-00
	(ಬಿ) 5 ಚದರ ಮೀಟರ್ ಗಿಂತ ಹೆಚ್ಚಿಗೆ ಆದರೆ 2.5 ಚದರ ಮೀಟರ್ ವರೆಗಿನ ಜಾಗಕ್ಕೆ	55-00

ಕ್ರಮ ಸಂಖ್ಯೆ	**ವಿವರಗಳು**	**ಪ್ರತಿ ವರ್ಷಕ್ಕೆ ತೆರಿಗೆಯ ಗರಿಷ್ಠ ಮೊಬಲಗು**
(ಸಿ)	ಹೆಚ್ಚಿನ ಪ್ರತಿ 2.5 ಚದರ ಮೀಟರ್ ಅಥವಾ ಅದಕ್ಕಿಂತ ಕಡಿಮೆ ಜಾಗಕ್ಕೆ	55 – 00
8.	ಬೀದಿಗಳಿಗೆ ಅಡ್ಡಲಾಗಿ ತೂಗು ಹಾಕಿದ ದೀಪಾಲಂಕೃತವಿಲ್ಲದ ಜಾಹಿರಾತುಗಳು	
	(ಎ) 1 ಚದರ ಮೀಟರ್ ವರೆಗಿನ ಜಾಗಕ್ಕೆ	10-00
	(ಬಿ) 1 ಚದರ ಮೀಟರ್ ಗಿಂತ ಹೆಚ್ಚಿನ ಮತ್ತು 2.5 ಚದರ ಮೀಟರ್ ವರೆಗಿನ ಜಾಗಕ್ಕೆ	16-00
	(ಸಿ) ಹೆಚ್ಚಿನ ಪ್ರತಿ 2.5 ಚದರ ಮೀಟರ್ ಅಥವಾ ಕಡಿಮೆ ಜಾಗಕ್ಕೆ	16-00
	ಟಿಪ್ಪಣಿ:- 8ನೇ ಬಾಬಿನ ಮೇಲಿನ ತೆರಿಗೆಯು, ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು, ಯಾವ ಜಾಗಕ್ಕೆ ನಿರ್ಧರಿಸಬೇಕಾದ ಶ್ರೇಣಿಗನುಸಾರವಾಗಿ ವಿಧಿಸಬಹುದೋ ಆ ಜಾಗಕ್ಕೆ ವಿಧಿಸಬಹುದಾದ ತೆರಿಗೆ ಹೆಚ್ಚಿಗೆಯಾಗಿ ಇರುವುದು	
9.	ಖಾಲಿ ಇರುವ, ಆದರೆ ಜಾಹೀರಾತುದಾರನ ಹೆಸರು ಇರುವ ಅಥವಾ ಅದರ ಮೇಲೆ ``ಬಾಡಿಗೆಗೆ ಇದೆ'' ಎಂಬ ಪ್ರಕಟಣೆ ಇರುವ ದೀಪಾಲಂಕೃತವಿಲ್ಲದ ಜಾಹಿರಾತು ಪ್ರಕಟಣಾ ಫಲಕ-	

ಕ್ರಮ ಸಂಖ್ಯೆ	ವಿವರಗಳು	ಪ್ರತಿ ವರ್ಷಕ್ಕೆ ತೆರಿಗೆಯ ಗರಿಷ್ಠ ಮೊಬಲಗು
	(ಎ) 1 ಚದರ ಮೀಟರ್ ವರೆಗಿನ ಜಾಗಕ್ಕೆ	5-00
	(ಬಿ) 1 ಚದರ ಮೀಟರ್ ಗಿಂತ ಹೆಚ್ಚಿನ, ಆದರೆ 2.5 ಚದರ ಮೀಟರ್ ವರೆಗಿನ ಜಾಗಕ್ಕೆ	8-00
	(ಸಿ) ಹೆಚ್ಚಿನ ಪ್ರತಿ 2.5 ಚದರ ಮೀಟರ್ ಅಥವಾ ಕಡಿಮೆ ಜಾಗಕ್ಕೆ	8-00
10.	ಹರಾಜು ನಡೆಯುವ ಆವರಣಗಳಲ್ಲಿ ಇರುವವುಗಳನ್ನು ಹೊರತುಪಡಿಸಿ, ಪ್ರತಿಯೊಂದು ಹರಾಜು ಮಾರಾಟದ ಜಾಹೀರಾತು ಮಾಡುವುದಕ್ಕಾಗಿ ಎರಡಕ್ಕಿಂತ ಹೆಚ್ಚಿಗೆ ಇರದ, ಹಾಗೂ ಸೂಕ್ತ ಗಾತ್ರದ ಎರಡು ಫಲಕಗಳನ್ನು ಆ ಸ್ಥಳದಲ್ಲಿನ, ಎದ್ದು ಕಾಣುವ ಭಾಗದಲ್ಲಿ ಒಂದನ್ನು ಮತ್ತು ಮುನ್ಸಿಪಾಲಿಟಿ ದೀಪದ ಕಂಬದ ಮೇಲೆ ಮತ್ತೊಂದನ್ನು, ಫಲಕಗಳನ್ನು ಹಾಕಲು ಹರಾಜುದಾರರಿಗೆ ಅನುಮತಿ ಇದೆ.	100 (ಮುನ್ಸಿಪಾಲಿಟಿಯ ಸ್ತಂಭದ ಮೇಲೆ ಪ್ರದರ್ಶಿಸುವುದಕ್ಕಾಗಿ ಬಾಡಿಗೆಯೂ ಒಳಗೊಂಡಂತೆ)

XXX XXX XXX

ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ರ

(1977ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಉದ್ಧೃತ ಭಾಗ

XXX XXX XXX

103.ವಿಧಿಸಬಹುದಾದ ತೆರಿಗೆಗಳು.- ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೆ ಒಳಪಟ್ಟು, ನಗರಪಾಲಿಕೆಯು,-

(ಬಿ) ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ ದರಗಳನ್ನು ಮೀರದ ದರಗಳಲ್ಲಿ ಈ ಕೆಳಕಂಡ ತೆರಿಗೆಗಳಲ್ಲಿ ಯಾವುದೇ ಒಂದು ಅಥವಾ ಹೆಚ್ಚು ತೆರಿಗೆಗಳನ್ನು ಅಥವಾ ಶುಲ್ಕವನ್ನು ವಿಧಿಸತಕ್ಕದ್ದು,-

XXX XXX XXX

(vi) ಜಾಹೀರಾತಿನ ಮೇಲೆ ತೆರಿಗೆ ಅಥವಾ ಶುಲ್ಕ;

XXX XXX XXX

134. ಜಾಹೀರಾತಿನ ಮೇಲೆ ತೆರಿಗೆ ಅಥವಾ ಶುಲ್ಕ .-ಯಾವುದೇ ಭೂಮಿಯ, ಕಟ್ಟಡದ, ಗೋಡೆಯ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಯಾವುದೇ ಜಾಹೀರಾತನ್ನು ಇಟ್ಟಿರುವ, ಪ್ರದರ್ಶಿಸುವ, ಅಳವಡಿಸುವ ಅಥವಾ ಉಳಿಸಿಕೊಂಡಿರುವ ಅಥವಾ ಯಾವುದೇ ರೀತಿಯಲ್ಲಾಗಲಿ ಯಾವುದೇ ಸಾರ್ವಜನಿಕ ಇಲ್ಲವೇ ಖಾಸಗಿ ಸ್ಥಳದಲ್ಲಾಗಲಿ ಸಾರ್ವಜನಿಕರ ದೃಷ್ಟಿಗೆ ಬೀಳುವಂತೆ ಯಾವುದೇ ಜಾಹೀರಾತನ್ನು ಪ್ರದರ್ಶಿಸುವ ಪ್ರತಿಯೊಬ್ಬ ವ್ಯಕ್ತಿಯು, ಹಾಗೆ ಇಟ್ಟಿರುವ, ಪ್ರದರ್ಶಿಸಿದ, ಅಳವಡಿಸಿದ, ಉಳಿಸಿಕೊಂಡಿರುವ ಅಥವಾ ಸಾರ್ವಜನಿಕ ದೃಷ್ಟಿಗೆ ಬೀಳುವಂತೆ ಪ್ರದರ್ಶಿಸಿರುವ ಪ್ರತಿಯೊಂದು ಜಾಹೀರಾತಿನ ಮೇಲೆ ಸರ್ಕಾರದ

ಅನುಮೋದನೆಯೊಂದಿಗೆ ನಗರಪಾಲಿಕೆಯು ನಿರ್ಣಯದ ಮೂಲಕ ನಿರ್ಧರಿಸಬಹುದಾದಂತೆ ಲೆಕ್ಕಹಾಕಿದಂಥ ದರಗಳಲ್ಲಿ ಮತ್ತು ಅಂಥ ರೀತಿಯಲ್ಲಿ ಮತ್ತುಅಂಥ ವಿನಾಯಿತಿಗಳಿಗೊಳಪಟ್ಟು ತೆರಿಗೆಯನ್ನು ಅಥವಾ ಶುಲ್ಕವನ್ನು ಪಾವತಿಮಾಡತಕ್ಕದ್ದು:

ಪರಂತು, ಆದರಗಳು ಯಾವಾಗಲೂ ಈ ಬಗ್ಗೆ ಸರ್ಕಾರವು ವಿಧಿಸಿದ ಗರಿಷ್ಠ ಮತ್ತು ಕನಿಷ್ಠ ಮಿತಿಗಳಿಗೆ ಒಳಪಟ್ಟಿರತಕ್ಕದ್ದು:

ಮತ್ತೂ ಪರಂತು,-

(ಎ) ಸಾರ್ವಜನಿಕ ಸಭೆಯ ಅಥವಾ ಮಹಾನಗರ ಪಾಲಿಕೆಯ; ಅಥವಾ

(ಬಿ) ಯಾವುದೇ ಶಾಸನ ರಚನಾ ನಿಕಾಯದ ಚುನಾವಣೆಯ; ಅಥವಾ

(ಸಿ) ಅಂಥ ಚುನಾವಣೆಗೆ ಸಂಬಂಧಿಸಿದಂತೆ ಉಮೇದುವಾರಿಕೆಯ

- ಯಾವುದೇ ಜಾಹೀರಾತು ಅಥವಾ ನೋಟೀಸಿನ ಮೇಲೆ ಈ ಪ್ರಕರಣದ ಮೇರೆಗೆ ಯಾವುದೇ ತೆರಿಗೆಯನ್ನು ಅಥವಾ ಶುಲ್ಕವನ್ನು ವಿಧಿಸತಕ್ಕದ್ದಲ್ಲ:

ಮತ್ತೂ ಪರಂತು, ಗಗನಚುಂಬಿ ಜಾಹೀರಾತು ಅಲ್ಲದ, ಮತ್ತು,–

(ಎ) ಯಾವುದೇ ಕಟ್ಟಡದ ಕಿಟಕಿಯೊಳಗೆ ಪ್ರದರ್ಶಿಸಿರುವಂಥ, ಅಥವಾ

(ಬಿ) ಯಾವ ಭೂಮಿಯ ಅಥವಾ ಕಟ್ಟಡದ ಮೇಲೆ ಅಥವಾ ಮೇಲ್ಭಾಗದಲ್ಲಿ ಅಂಥ ಜಾಹೀರಾತನ್ನು ಪ್ರದರ್ಶಿಸಲಾಗಿದೆಯೋ ಆ ಯಾವುದೇ ಭೂಮಿಯೊಳಗೆ ಅಥವಾ ಕಟ್ಟಡದೊಳಗೆ ನಡೆಸಲಾಗುತ್ತಿರುವ ವ್ಯಾಪಾರ ಅಥವಾ ವ್ಯವಹಾರಕ್ಕೆ ಅಥವಾ ಅಂಥ ಭೂಮಿಯ ಅಥವಾ ಕಟ್ಟಡದ ಅಥವಾ ಅದರಲ್ಲಿನ ಯಾವುದೇ ವಸ್ತುಗಳ ಯಾವುದೇ ಮಾರಾಟಕ್ಕೆ ಅಥವಾ ಬಾಡಿಗೆಗೆ ನೀಡುವುದಕ್ಕೆ ಅಥವಾ ಅಂಥ ಭೂಮಿಯ ಅಥವಾ ಕಟ್ಟಡದ ಮೇಲೆ ಅಥವಾ ಅದರಲ್ಲಿ ನಡೆಸಲಾಗುವ ಯಾವುದೇ ಮಾರಾಟಕ್ಕೆ, ಮನರಂಜನೆಗೆ ಅಥವಾ ಸಭೆಗೆ ಸಂಬಂಧಿಸಿದಂಥ; ಅಥವಾ

(ಸಿ) ಯಾವ ಭೂಮಿಯ ಅಥವಾ ಕಟ್ಟಡದ ಮೇಲೆ ಅಥವಾ ಮೇಲ್ಭಾಗದಲ್ಲಿ ಜಾಹೀರಾತನ್ನು ಪ್ರದರ್ಶಿಸಲಾಗಿದೆಯೋ ಆ ಭೂಮಿಯ ಅಥವಾ ಕಟ್ಟಡದ ಹೆಸರಿಗೆ ಅಥವಾ ಅಂಥ ಭೂಮಿಯ ಅಥವಾ ಕಟ್ಟಡದ ಮಾಲೀಕನ ಅಥವಾ ಅಧಿ ಭೋಗದಾರನ ಹೆಸರಿಗೆ ಸಂಬಂಧಪಟ್ಟಂಥ; ಅಥವಾ

(ಡಿ) ಯಾವುದೇ ರೈಲ್ವೆಯ ವ್ಯವಹಾರಗಳಿಗೆ ಸಂಬಂಧಪಟ್ಟಂಥ; ಅಥವಾ

(ಇ) ಯಾವುದೇ ರೈಲ್ವೆ ನಿಲ್ದಾಣದೊಳಗೆ ಅಥವಾ ಯಾವುದೇ ಬೀದಿಯ ಎದುರಿಗಿರುವಂಥ ಗೋಡೆಯ ಅಥವಾ ಸ್ವತ್ತಿನ ಮೇಲ್ಮೈನ ಯಾವುದೇ ಭಾಗವನ್ನು ಹೊರತುಪಡಿಸಿ ರೈಲ್ವೆಯ ಯಾವುದೇ ಗೋಡೆಯ ಅಥವಾ ಇತರ ಸ್ವತ್ತಿನ ಮೇಲೆ ಪ್ರದರ್ಶಿಸಿರುವಂಥ

- ಯಾವುದೇ ಜಾಹೀರಾತಿನ ಮೇಲೆ ಅಂಥ ಯಾವುದೇ ತೆರಿಗೆಯನ್ನುಅಥವಾ ಶುಲ್ಕವನ್ನುವಿಧಿಸತಕ್ಕದ್ದಲ್ಲ.

ವಿವರಣೆ 1.-ಈ ಪ್ರಕರಣದಲ್ಲಿ `ರಚನೆ'ಎಂಬ ಪದವು ಜಾಹೀರಾತಿನಂತೆ ಅಥವಾ ಜಾಹೀರಾತು ಮಾಧ್ಯಮವಾಗಿ ಬಳಸಲಾದ ಚಕ್ರಗಳ ಮೇಲಿರುವ ಯಾವುದೇ ಚಲಿಸುವ ಫಲಕವನ್ನು ಒಳಗೊಳ್ಳತಕ್ಕದ್ದು.

ವಿವರಣೆ 2.-ಈ ಪ್ರಕರಣದಲ್ಲಿ `ಗಗನಚುಂಬಿ'ಜಾಹೀರಾತು ಎಂದರೆ, ಯಾವುದೇ ಸಾರ್ವಜನಿಕ ಸ್ಥಳದಲ್ಲಿನ ಒಂದು ಜಾಗದಿಂದ ಆಕಾಶದ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ಕಾಣುವಂಥ ಯಾವುದೇ ಭೂಮಿಯ, ಕಟ್ಟಡದ, ಗೋಡೆಯ, ಅಥವಾ ರಚನೆಯ ಅಥವಾ ಅದರ ಯಾವುದೇ ಭಾಗದ ಮೇಲೆ ಅಥವಾ ಮೇಲ್ಭಾಗದಲ್ಲಿ ಸಂಪೂರ್ಣವಾಗಿ ಅಥವಾ ಭಾಗಶಃ ಇರುವ ಯಾವುದೇ ಸ್ತಂಬ, ಕಂಬ, ನಿಲುಗಂಬ, ಚೌಕಟ್ಟು ಅಥವಾ ಇತರ ಆಸರೆಯ ಮೇಲೆ ನಿಂತಿರುವ ಅಥವಾ ಅದಕ್ಕೆ ಲಗತ್ತಾದ ಯಾವುದೇ ಜಾಹೀರಾತು ಮತ್ತುಅದು ಅಂಥ

ಯಾವುದೇ ಸ್ಥಂಬ, ಕಂಬ, ನಿಲುಗಂಬ, ಚೌಕಟ್ಟುಅಥವಾ ಇತರ ಆಸರೆಯ ಎಲ್ಲ ಮತ್ತು ಪ್ರತಿಯೊಂದು ಭಾಗವನ್ನೂ ಒಳಗೊಳ್ಳುತ್ತದೆ. "ಗಗನ ಚುಂಬಿ ಜಾಹೀರಾತು" ಎಂಬ ಪದವು, ಯಾವುದೇ ಭೂಮಿಯ, ಕಟ್ಟಡದ, ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಅಥವಾ ಯಾವುದೇ ಸಾರ್ವಜನಿಕ ಸ್ಥಳದ ಮೇಲೆ ಅಥವಾ ಮೇಲ್ಭಾಗದಲ್ಲಿಯಾವುದೇ ಜಾಹೀರಾತಿನ ಉದ್ದೇಶಗಳಿಗಾಗಿ ಸಂಪೂರ್ಣವಾಗಿ ಅಥವಾ ಭಾಗಶಃ ಬಳಸಲಾದ ಯಾವುದೇ ಬಲೂನು, ಪ್ಯಾರಾಚೂಟ್ ಅಥವಾ ಅಂಥದೇ ಸಾಧನವನ್ನು ಸಹಒಳಗೊಳ್ಳತಕ್ಕದ್ದು, ಆದರೆ,-

(ಎ) ಯಾವುದೇ ಜಾಹೀರಾತಿನ ಉದ್ದೇಶಕ್ಕಾಗಿ ಸಂಪೂರ್ಣವಾಗಿ ಅಥವಾ ಭಾಗಶಃ ಅಳವಡಿಸಿಕೊಂಡ ಅಥವಾ ಬಳಸಿಕೊಂಡ ಹೊರತು, ಯಾವುದೇ ಧ್ವಜಸ್ತಂಭ, ಕಂಬ, ವ್ಯಾನ್ ಅಥವಾ ವಾಯು ದಿಕ್ಸೂಚಿ; ಅಥವಾ

(ಬಿ) ಯಾವುದೇ ಕಟ್ಟಡದ ಗೋಡೆಗೆ ಅಥವಾ ಪ್ಯಾರಾಪೆಟ್ ಗೋಡೆಗೆ ಅಥವಾ ಅದರ ತುದಿಯ ಮೇಲೆ ಅಥವಾ ಯಾವುದೇ ಗೋಡೆಯ ಕಾರ್ನೀಸು ಅಥವಾ ತಡೆವರಸೆಯ ಮೇಲೆ ಅಥವಾ ಮೇಲ್ಛಾವಣಿಯ ಅಂಚಿಗೆ ಸುಭದ್ರವಾಗಿ ಅಳವಡಿಸಿದ ಯಾವುದೇ ಚಿಹ್ನೆ ಅಥವಾ ಯಾವುದೇ ಫಲಕ, ಚೌಕಟ್ಟು ಅಥವಾ ಇತರ ಸಾಧನ:

ಪರಂತು, ಅಂಥ ಫಲಕ, ಚೌಕಟ್ಟು ಅಥವಾ ಇತರ ಸಾಧನವು ಸಪಾಟಾದ ಮೇಲ್ಮೈನದಾಗಿರತಕ್ಕದ್ದು ಮತ್ತು ರಂಧ್ರಕೊರೆದು ಮಾಡಿದ ಚಿತ್ರ ಕೆಲಸವಾಗಿರತಕ್ಕದ್ದಲ್ಲ ಮತ್ತು ಯಾವ ಗೋಡೆಗೆ ಅಥವಾ ಪ್ಯಾರಾಪೆಟ್ ಗೋಡೆಗೆ ಅಥವಾ ಅಂಚಿಗೆ ಅಥವಾ ಅದಕ್ಕೆ ಎದುರಾಗಿ ಅಥವಾ ಅದರ ಮೇಲೆ ಅದನ್ನು ಅಳವಡಿಸಲಾಗಿದೆಯೋ ಅಥವಾ ಅದು ನಿಂತಿದೆಯೋ, ಆ ಯಾವುದೇ ಗೋಡೆಯ ಅಥವಾ ಪ್ಯಾರಾಪೆಟ್ ಗೋಡೆಯ ಅಥವಾ ಅಂಚಿನ ಯಾವುದೇ ಭಾಗದ ಮೇಲೆ ಅದು ಒಂದು ಮೀಟರಿಗಿಂತ ಹೆಚ್ಚುಎತ್ತರಕ್ಕೆ ವಿಸ್ತರಿಸಿರತಕ್ಕದ್ದಲ್ಲ;

(ಸಿ) ಯಾವ ಭೂಮಿಯ ಅಥವಾ ಕಟ್ಟಡದ ಮೇಲೆ ಅಥವಾ ಮೇಲ್ಭಾಗದಲ್ಲಿ ಜಾಹೀರಾತನ್ನು ಪ್ರದರ್ಶಿಸಲಾಗಿದೆಯೋ ಆ ಭೂಮಿಯ ಅಥವಾ ಕಟ್ಟಡದ ಹೆಸರಿಗೆ ಅಥವಾ ಅಂಥ ಭೂಮಿಯ ಅಥವಾ ಕಟ್ಟಡದ ಮಾಲೀಕನ ಅಥವಾ ಅಧಿಭೋಗದಾರನ ಹೆಸರಿಗೆ ಸಂಬಂಧಪಟ್ಟ ಯಾವುದೇ ಜಾಹೀರಾತು; ಅಥವಾ

(ಡಿ) ರೈಲ್ವೆ ವ್ಯವಹಾರಕ್ಕೆ ಅನನ್ಯವಾಗಿ ಸಂಬಂಧಿಸಿದ ಮತ್ತು ಯಾವುದೇ ರೈಲ್ವೆ, ರೈಲ್ವೆ ನಿಲ್ದಾಣ, ಪ್ರಾಂಗಣ, ಪ್ಲಾಟ್‌ಫಾರಂ ಅಥವಾ ರೈಲ್ವೆಗೆ ಸೇರಿದ ನಿಲ್ದಾಣಕ್ಕೆ ಹೋಗುವ ದಾರಿ ಇವುಗಳ ಮೇಲೆ ಅಥವಾ ಮೇಲ್ಭಾಗದಲ್ಲಿ ಸಂಪೂರ್ಣವಾಗಿ ಹಾಕಲಾದ ಮತ್ತು ಯಾವುದೇ ಬೀದಿಗೆ ಅಥವಾ ಸಾರ್ವಜನಿಕ ಸ್ಥಳದಲ್ಲಿ ಬೀಳದ ಹಾಗೆ ಹಾಕಲಾದ ಯಾವುದೇ ಜಾಹೀರಾತು; ಅಥವಾ

(ಇ) ಮಾರಾಟ ಮಾಡಬೇಕಾದ ಅಥವಾ ಬಾಡಿಗೆಗೆ ಕೊಡಬೇಕಾದ ಭೂಮಿ ಅಥವಾ ಕಟ್ಟಡಗಳ ಬಗ್ಗೆ, ಅಂಥ ಭೂಮಿಯ ಅಥವಾ ಕಟ್ಟಡಗಳ ಮೇಲೆ ಹಾಕಲಾದ ಯಾವುದೇ ನೋಟೀಸು

- ಒಳಗೊಳ್ಳತಕ್ಕದ್ದಲ್ಲ.

ವಿವರಣೆ 3.-ಈ ಪ್ರಕರಣದ ಉದ್ದೇಶಕ್ಕಾಗಿ `ಸಾರ್ವಜನಿಕ ಸ್ಥಳ'ಎಂದರೆ, ಅದನ್ನು ವಾಸ್ತವವಾಗಿ ಸಾರ್ವಜನಿಕರು ಬಳಸುತ್ತಿರಲಿ ಅಥವಾ ಬಳಸದಿರಲಿ ಅಥವಾ ಉಪಭೋಗಿಸುತ್ತಿರಲಿ ಅಥವಾ ಉಪಭೋಗಿಸದಿರಲಿ, ಸಾರ್ವಜನಿಕರ ಬಳಕೆಗೆ ಮತ್ತು ಉಪಭೋಗಕ್ಕೆ ಮುಕ್ತವಾಗಿರುವ ಆ ಯಾವುದೇ ಸ್ಥಳ.

XXX XXX XXX

135. ಆಯುಕ್ತರ ಲಿಖಿತ ಅನುಮತಿಯಿಲ್ಲದ ಜಾಹೀರಾತುಗಳ ನಿಷೇಧ.- (1) 134ನೇ ಪ್ರಕರಣದ ಮೇರೆಗೆ ತೆರಿಗೆ ಅಥವಾ ಶುಲ್ಕ ವಿಧಿಸುವುದನ್ನು ನಗರ ಪಾಲಿಕೆಯು ನಿರ್ಧರಿಸಿದ ತರುವಾಯ ಆಯುಕ್ತರ ಲಿಖಿತ ಅನುಮತಿ ಇಲ್ಲದೆ ನಗರದೊಳಗಿನ ಯಾವುದೇ ಭೂಮಿಯ, ಕಟ್ಟಡದ, ಗೋಡೆಯ, ಜಾಹೀರಾತು ಫಲಕಗಳ ಅಥವಾ ರಚನೆಯ ಮೇಲೆ ಅಥವಾ ಅದರ ಮೇಲ್ಭಾಗದಲ್ಲಿ ಯಾವುದೇ ಜಾಹೀರಾತನ್ನು ನಿರ್ಮಿಸತಕ್ಕದ್ದಲ್ಲ, ಪ್ರದರ್ಶಿಸತಕ್ಕದ್ದಲ್ಲ, ಅಳವಡಿಸತಕ್ಕದ್ದಲ್ಲ ಅಥವಾ ಇಡತಕ್ಕದ್ದಲ್ಲ ಅಥವಾ ಯಾವುದೇ ಸ್ಥಳದಲ್ಲಿ ಯಾವುದೇ ರೀತಿಯಲ್ಲೇ ಆಗಲಿ ಪ್ರದರ್ಶಿಸತಕ್ಕದ್ದಲ್ಲ.

(2) ಆಯುಕ್ತರು,-

(i) ಜಾಹೀರಾತು ನಗರ ಪಾಲಿಕೆಯು ರಚಿಸಿದ ಯಾವುದೇ ಉಪವಿಧಿಯನ್ನುಉಲ್ಲಂಘಿಸಿದರೆ; ಅಥವಾ

(ii) ಜಾಹೀರಾತಿಗೆ ಸಂಬಂಧಿಸಿದಂತೆ ತೆರಿಗೆ ಅಥವಾ ಶುಲ್ಕ ಯಾವುದಾದರೂ ಬಾಕಿ ಇದ್ದು ಅದನ್ನು ಪಾವ ಮಾಡಿರದಿದ್ದರೆ,

- ಅಂಥ ಅನುಮತಿಯನ್ನು ಕೊಡತಕ್ಕದ್ದಲ್ಲ.

(3) (2)ನೇ ಉಪಪ್ರಕರಣದ ಉಪಬಂಧಗಳಿ ಗೊಳಪಟ್ಟು, ಜಾಹೀರಾತು ತೆರಿಗೆಗೆ ಗುರಿಯಾಗಬಹುದಾದ ಜಾಹೀರಾತಿನ ಸಂದರ್ಭದಲ್ಲಿ, ಆಯುಕ್ತರು, ಯಾವ ಅವಧಿಗೆ ತೆರಿಗೆಯ ಪಾವತಿಯು ಸಂಬಂಧಪಟ್ಟಿದೆಯೋ ಆ ಯಾವುದೇ ಅವಧಿಗೆ ಅನುಮತಿಯನ್ನು ಕೊಡತಕ್ಕದ್ದು ಮತ್ತು ಅಂಥ ಅನುಮತಿಗೆ ಸಂಬಂಧಿಸಿದಂತೆ ಯಾವುದೇ ಫೀಜನ್ನು ವಿಧಿಸತಕ್ಕದ್ದಲ್ಲ:

ಪರಂತು, ಈ ಪ್ರಕರಣದ ಉಪಬಂಧಗಳು, ರೈಲ್ವೆ ವ್ಯವಹಾರಕ್ಕೆ ಸಂಬಂಧಪಟ್ಟಂತೆ ರೈಲ್ವೆಯ ಆವರಣಗಳಲ್ಲಿ ನಿರ್ಮಿಸಿದ, ಪ್ರದರ್ಶಿಸಿದ, ಅಳವಡಿಸಿದ, ಹಾಕಲಾದ ಯಾವುದೇ ಜಾಹೀರಾತಿಗೆ ಅನ್ವಯಿಸತಕ್ಕದ್ದಲ್ಲ

XXX XXX XXX

138. ಅನಧಿಕೃತ ಜಾಹೀರಾತನ್ನು ತೆಗೆದುಹಾಕುವುದು.- 134ನೇ ಪ್ರಕರಣದ ಅಥವಾ 135ನೇ ಪ್ರಕರಣದ ಉಪಬಂಧಗಳಿಗೆ ತದ್ವಿರುದ್ಧವಾಗಿ ಅಥವಾ ಯಾವುದೇ ಅವಧಿಗೆ ಜಾಹೀರಾತನ್ನು ನಿರ್ಮಿಸಲು, ಪ್ರದರ್ಶಿಸಲು ಅಳವಡಿಸಲು ಅಥವಾ ಇಡಲು ನೀಡಲಾದ ಲಿಖಿತ ಅನುಮತಿಯು ಮುಕ್ತಾಯವಾದ ಅಥವಾ ಅನೂರ್ಜಿತವಾದ ತರುವಾಯ, ಯಾವುದೇ ಜಾಹೀರಾತನ್ನುಇಟ್ಟರೆ, ಪ್ರದರ್ಶಿಸಿದರೆ, ಅಳವಡಿಸಿದರೆ ಅಥವಾ ಉಳಿಸಿಕೊಂಡರೆ, ಆಯುಕ್ತರು ಲಿಖಿತ ನೋಟೀಸನ್ನು ಕೊಡುವ ಮೂಲಕ, ಯಾವ ಭೂಮಿಯ, ಕಟ್ಟಡದ, ಗೋಡೆಯ, ಜಾಹೀರಾತು ಫಲಕದ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಅದನ್ನು ಇಡಲಾಗಿದೆಯೋ, ಪ್ರದರ್ಶಿಸಲಾಗಿದೆಯೋ, ಅಳವಡಿಸಲಾಗಿದೆಯೋ ಅಥವಾ ಉಳಿಸಿಕೊಳ್ಳಲಾಗಿದೆಯೋ, ಆ ಯಾವುದೇ ಭೂಮಿಯ, ಕಟ್ಟಡದ, ಗೋಡೆಯ, ಜಾಹೀರಾತು ಫಲಕದ ಅಥವಾ ರಚನೆಯ ಮಾಲೀಕನನ್ನು ಅಥವಾ ಅಧಿಭೋಗದಾರನನ್ನು ಅಂಥ ಜಾಹೀರಾತನ್ನುಕೆಳಗೆ ಇಳಿಸುವಂತೆ ಅಥವಾ ತೆಗೆದುಹಾಕುವಂತೆ, ಅಗತ್ಯಪಡಿಸಬಹುದು ಮತ್ತು ಯಾವುದೇ ಕಟ್ಟಡ, ಭೂಮಿ ಅಥವಾ ಸ್ವತ್ತನ್ನು ಪ್ರವೇಶಿಸಬಹುದು ಮತ್ತು ಜಾಹೀರಾತನ್ನು ತೆಗೆದು ಹಾಕಿಸಬಹುದು.

XXX XXX XXX

139. ಜಾಹೀರಾತಿನ ಮೇಲೆ ತೆರಿಗೆ ಅಥವಾ ಶುಲ್ಕ ಸಂಗ್ರಹಣೆ.- ಆಯುಕ್ತರು 134ನೇ ಪ್ರಕರಣದ ಮೇರೆಗೆ ಜಾಹೀರಾತಿನ ಮೇಲೆ ವಿಧಿಸಬಹುದಾದ ಯಾವುದೇ ತೆರಿಗೆಯ ಅಥವಾ ಶುಲ್ಕದ ಸಂಗ್ರಹಣೆಯನ್ನು ಉಪವಿಧಿಗಳಲ್ಲಿ ಉಪಬಂಧಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಒಂದು ಬಾರಿಗೆ ಒಂದು ವರ್ಷಕ್ಕೆಮೀರದ ಯಾವುದೇ ಅವಧಿಗೆ ಗುತ್ತಿಗೆಗೆ ಕೊಡಬಹುದು

XXX XXX XXX

ಅನುಸೂಚಿ - VIII

[103ನೇ ಪ್ರಕರಣವನ್ನು ನೋಡಿ]

ಜಾಹೀರಾತುಗಳ ಮೇಲೆ ತೆರಿಗೆ

ಕ್ರ. ಸಂ.		ವಿವರಗಳು	ಪ್ರತಿ ವರ್ಷಕ್ಕೆ ತೆರಿಗೆಯ ಗರಿಷ್ಠ ಮೊಬಲಗು ರೂ.
1.		ಭೂಮಿ, ಕಟ್ಟಡ, ಗೋಡೆ, ಜಾಹೀರಾತು ಫಲಕಗಳು, ಚೌಕಟ್ಟು, ಸ್ತಂಭ, ರಚನೆಗಳು, ಇತ್ಯಾದಿಗಳ ಮೇಲಿನ ದೀಪಾಲಂಕಾರವಿಲ್ಲದ ಜಾಹೀರಾತುಗಳು,-	**ರೂ.**
	(ಎ)	1 ಚದರ ಮೀಟರ್‌ವರೆಗಿನ ಜಾಗಕ್ಕೆ	50
	(ಬಿ)	1 ಚದರ ಮೀಟರ್‌ಗಿಂತ ಹೆಚ್ಚು ಮತ್ತು 2.5 ಚದರ ಮೀಟರ್‌ವರೆಗಿನ ಜಾಗಕ್ಕೆ	80
	(ಸಿ)	ಪ್ರತಿಯೊಂದು ಹೆಚ್ಚಿನ 2.5 ಚದರ ಮಿಟರ್ ಜಾಗಕ್ಕೆ ಅಥವಾ ಅದಕ್ಕಿಂತ ಕಡಿಮೆ ಜಾಗಕ್ಕೆ	80
2.		ಎತ್ತುಗಳಿಂದ, ಕುದುರೆಗಳಿಂದ ಅಥವಾ ಇತರ ಪ್ರಾಣಿಗಳಿಂದ, ಮನುಷ್ಯರಿಂದ, ಸೈಕಲ್ಲುಗಳಿಂದ ಎಳೆಯಲಾಗುವ ವಾಹನಗಳ ಮೇಲೆ ಒಯ್ಯಲಾಗುವ ಅಥವಾ ಯಾವುದೇ ವಾಹನದ ಮೇಲೆ ಒಯ್ಯಲಾಗುವ ಸಾಧನದ ಮೇಲಿನ ದೀಪಾಲಂಕಾರವಿಲ್ಲದ ಯಾವುದೇ ಜಾಹೀರಾತುಗಳು,–	
	(ಎ)	5 ಚದರ ಮೀಟರ್‌ವರೆಗಿನ ಜಾಗಕ್ಕೆ	300
	(ಬಿ)	ಪ್ರತಿಯೊಂದು ಹೆಚ್ಚಿನ 5 ಚದರ ಮೀಟರ್ ಅಥವಾ ಅದಕ್ಕಿಂತ ಕಡಿಮೆಯ ಜಾಗಕ್ಕೆ	300
3.		ವಾಹನಗಳ ಮೇಲೆ ಒಯ್ಯುವ ದೀಪಾಲಂಕೃತ ಜಾಹೀರಾತು ಫಲಕಗಳು.	
	(ಎ)	5 ಚದರ ಮೀಟರ್ವರೆಗಿನ ಜಾಗಕ್ಕೆ	375
	(ಬಿ)	ಪ್ರತಿಯೊಂದು ಹೆಚ್ಚಿನ 1 ಚದರ ಮೀಟರ್ ಅಥವಾ ಅದಕ್ಕಿಂತ ಕಡಿಮೆಯ ಜಾಗಕ್ಕೆ	75
4.		ಸ್ವಿಚ್‌ಬೋರ್ಡ್‌ನವರು ಒಯ್ಯುವ ದೀಪಾಲಂಕೃತವಿಲ್ಲದ ಜಾಹೀರಾತು ಫಲಕಗಳು.	
	(ಎ)	1 ಚದರ ಮೀಟರ್‌ಗೆ ಮೀರದ ಪ್ರತಿಯೊಂದು ಫಲಕಕ್ಕೆ	75
	(ಬಿ)	1 ಚದರ ಮೀಟರ್‌ಗೆ ಮೀರಿದ ಮತ್ತು 2.5 ಚದರ ಮೀಟರ್ವರೆಗಿನ ಪ್ರತಿಯೊಂದು ಫಲಕಕ್ಕೆ	150

ಕ್ರ. ಸಂ.		ವಿವರಗಳು	ಪ್ರತಿ ವರ್ಷಕ್ಕೆ ತೆರಿಗೆಯ ಗರಿಷ್ಠ ಮೊಬಲಗು ರೂ.
	(ಸಿ)	ಪ್ರತಿಯೊಂದು ಹೆಚ್ಚಿನ ಚದರ ಮೀಟರ್ ಅಥವಾ ಅದಕ್ಕಿಂತ ಕಡಿಮೆ ವಿಸ್ತೀರ್ಣಕ್ಕೆ	75
5.	ಸ್ವಿಚ್‌ಬೋರ್ಡ್‌ನವರು ಒಯ್ಯುವ ದೀಪಾಲಂಕೃತ ಜಾಹೀರಾತು ಫಲಕಗಳು,-		
	(ಎ)	1 ಚದರ ಮೀಟರ್ ಮೀರದ ಪ್ರತಿಯೊಂದು ಫಲಕಕ್ಕೆ	150
	(ಬಿ)	1 ಚದರ ಮೀಟರ್‌ಗೆ ಮೀರಿದ ಮತ್ತು 2.5 ಚದರ ಮೀಟರ್‌ವರೆಗಿನ ಪ್ರತಿಯೊಂದು ಫಲಕಕ್ಕೆ	250
	(ಸಿ)	ಪ್ರತಿಯೊಂದು ಹೆಚ್ಚಿನ 1 ಚದರ ಮೀಟರ್ ಅಥವಾ ಅದಕ್ಕಿಂತ ಕಡಿಮೆಯ ವಿಸ್ತೀರ್ಣಕ್ಕೆ	150
6.	ಭೂಮಿ, ಕಟ್ಟಡ, ಗೋಡೆ, ಅಥವಾ ಜಾಹೀರಾತು ಫಲಕಗಳು, ಚೌಕಟ್ಟು, ಸ್ತಂಭ, ರಚನೆಗಳು ಇತ್ಯಾದಿಗಳ ಮೇಲಿನ ದೀಪಾಲಂಕೃತ ಜಾಹೀರಾತುಗಳು,-		
	(ಎ)	2 ಚದರ ಮೀಟರ್‌ವರೆಗಿನ ಜಾಗಕ್ಕೆ	75
	(ಬಿ)	2 ಚದರ ಮೀಟರ್‌ಗೆ ಮೀರಿದ ಮತ್ತು 5 ಚದರ ಮೀಟರ್‌ವರೆಗಿನ ಜಾಗಕ್ಕೆ	150
	(ಸಿ)	5 ಚದರ ಮೀಟರ್‌ಗೆ ಮೀರಿದ ಮತ್ತು 7.5 ಚದರ ಮೀಟರ್‌ವರೆಗಿನ ಜಾಗಕ್ಕೆ	150
	(ಡಿ)	ಪ್ರತಿಯೊಂದು ಹೆಚ್ಚಿನ 2.5 ಚದರ ಮೀಟರ್ ಅಥವಾ ಅದಕ್ಕಿಂತ ಕಡಿಮೆ ಜಾಗಕ್ಕೆ	175
7.	ಚಿತ್ರಮಂದಿರಗಳಲ್ಲಿ ಹಾಗೂ ಇತರ ಸಾರ್ವಜನಿಕ ಸ್ಥಳಗಳಲ್ಲಿ ತೆರೆಯ ಮೇಲೆ ಲ್ಯಾಂಟರ್ನ್ ಸ್ಲೈಡುಗಳು ಅಥವಾ ಅಂಥವೇ ಸಾಧನಗಳ ಮೂಲಕ ಪ್ರದರ್ಶಿಸುವ ಜಾಹೀರಾತುಗಳು,-		
	(ಎ)	5 ಚದರ ಮೀಟರ್‌ವರೆಗಿನ ಜಾಗಕ್ಕೆ	250
	(ಬಿ)	5 ಚದರ ಮೀಟರ್‌ಗೆ ಮೀರಿದ ಮತ್ತು 7.5 ಚದರ ಮೀಟರ್‌ವರೆಗಿನ ಜಾಗಕ್ಕೆ	275
	(ಸಿ)	ಪ್ರತಿಯೊಂದು ಹೆಚ್ಚಿನ 2.5 ಚದರ ಮೀಟರ್ ಅಥವಾ ಅದಕ್ಕಿಂತ ಕಡಿಮೆ ಜಾಗಕ್ಕೆ	275
8.	ಬೀದಿಗಳಿಗೆ ಅಡ್ಡಲಾಗಿ ತೂಗುಹಾಕಿದ ದೀಪಾಲಂಕೃತವಿಲ್ಲದ ಜಾಹೀರಾತುಗಳು,-		

ಕ್ರ. ಸಂ.		ವಿವರಗಳು	ಪ್ರತಿ ವರ್ಷಕ್ಕೆ ತೆರಿಗೆಯ ಗರಿಷ್ಠ ಮೊಬಲಗು ರೂ.
	(ಎ)	1 ಚದರ ಮೀಟರ್‌ವರೆಗಿನ ಜಾಗಕ್ಕೆ	50
	(ಬಿ)	1 ಚದರ ಮೀಟರ್‌ಗೆ ಮೀರಿದ ಮತ್ತು 2.5 ಚದರ ಮೀಟರ್‌ವರೆಗಿನ ಜಾಗಕ್ಕೆ	80
	(ಸಿ)	ಪ್ರತಿಯೊಂದು ಹೆಚ್ಚಿನ 2.5 ಚದರ ಮೀಟರ್ ಅಥವಾ ಅದಕ್ಕಿಂತ ಕಡಿಮೆ ಜಾಗಕ್ಕೆ	80
		ಸೂಚನೆ:- 8ನೇ ಬಾಬಿನ ಮೇಲೆ ತೆರಿಗೆಯು ಆಯುಕ್ತರು ನಿರ್ಧರಿಸುವಂಥ ಪ್ರಮಾಣಕ್ಕೆ ಅನುಸಾರವಾಗಿ ವಿಧಿಸಲಾಗುವಂಥ ಜಾಗದ ಬಾಡಿಗೆಗೆ ಹೆಚ್ಚಿಗೆಯಾಗಿ ಇರುತ್ತದೆ.	
9.	ಖಾಲಿ ಇರುವ, ಆದರೆ ಅವುಗಳ ಮೇಲೆ ಜಾಹೀರಾತುದಾರನ ಹೆಸರನ್ನು ಹೊಂದಿರುವ ಅಥವಾ "ಬಾಡಿಗೆಗೆ ಇದೆ' ' ಎಂಬ ಪ್ರಕಟಣೆಯನ್ನು ಪ್ರದರ್ಶಿಸಿರುವ ದೀಪಾಲಂಕೃತವಲ್ಲದ ಜಾಹೀರಾತು ಫಲಕಗಳು.		
	(ಎ)	1 ಚದರ ಮೀಟರ್‌ವರೆಗಿನ ಜಾಗಕ್ಕೆ	25
	(ಬಿ)	1 ಚದರ ಮೀಟರ್‌ಗೆ ಮೀರಿದ 2.5 ಚದರ ಮೀಟರ್‌ವರೆಗಿನ ಜಾಗಕ್ಕೆ	40
	(ಸಿ)	ಪ್ರತಿಯೊಂದು ಹೆಚ್ಚಿನ 2.5 ಚದರ ಮೀಟರ್ ಅಥವಾ ಅದಕ್ಕಿಂತ ಕಡಿಮೆ ಜಾಗಕ್ಕೆ	40
10.	ಹರಾಜು ನಡೆಯುವ ಆವರಣಗಳಲ್ಲಿ ಇರುವಂಥವುಗಳನ್ನು ಹೊರತುಪಡಿಸಿ ಪ್ರತಿಯೊಂದು ಹರಾಜು ಮಾರಾಟವನ್ನು ಜಾಹೀರಾತು ಮಾಡುವ ಸೂಕ್ತ ಅಳತೆಯ ಎರಡಕ್ಕಿಂತ ಹೆಚ್ಚಿಲ್ಲದ ಫಲಕಗಳನ್ನು ಆ ಸ್ಥಳದಲ್ಲಿನ ಪ್ರಮುಖ ನಿವೇಶನದ ಮೇಲೆ ಒಂದನ್ನು ಮತ್ತು ನಗರಪಾಲಿಕೆಯ ದೀಪದ ಕಂಬದ ಮೇಲೆ ಒಂದನ್ನು ಹಾಕಲು ಹರಾಜುದಾರರಿಗೆ ಅನುಮತಿ ನೀಡುವುದು.		500

XXX **XXX** **XXX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 300, 16ನೇ ಮಾರ್ಚ್ 2026